ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002

# ಕ್ರಿಯಾ ಯೋಜನೆ

# 2022–23

# 2022–23ನೇ ಸಾಲಿನ ಶೀರ್ಷಿಕೆವಾರು ಹಣಕಾಸು ಲಭ್ಯತೆಯ ವಿವರ

## 1. ಅನುದಾನ ಖಾತೆ

| ಕ್ರ.ಸಂ | 2021–22ನೇ ಸಾಲಿನ ಮುಂದುವರಿದ ಯೋಜನೆಗಳ ವಿವರ | ಬದ್ಧ ವೆಚ್ಚ / ಒಟ್ಟಾರೆ ಮೊತ್ತ |
|---|---|---|
| 1 | ಸಾಮಾನ್ಯ ಯೋಜನೆ | ರೂ.1,25,64,917.13 |
| 2 | ನಾಡಿನ ಪ್ರಸಿದ್ಧ ಸಾಹಿತಿಗಳ ಕೃತಿಗಳ ಪ್ರಕಟಣೆ | ರೂ.18,73,950–00 |
| 3 | ಪಿ.ಹೆಚ್.ಡಿ, ಎಂ.ಫಿಲ್ ಹಾಗು ಸೃಜನೇತರ ಕೃತಿಗಳ ಸಹಾಯಧನ | ರೂ.40,000–00 |
| 4 | ಜನ್ಮಶತಮಾನೋತ್ಸವ | ರೂ.14,21,031–00 |
| 5 | ಎಂ. ಗೋಪಾಲಕೃಷ್ಣ ಅಡಿಗರ ಸ್ಮರಣಾರ್ಥ ಕಾರ್ಯಕ್ರಮ | ರೂ.1,05,587–00 |
| 6 | ವಿಶೇಷ ಘಟಕ ಯೋಜನೆ | ರೂ.5,52,195–00 |
| 7 | ಗಿರಿಜನ ಉಪಯೋಜನೆ | ರೂ.22,07,662–00 |
| 8 | ದಲಿತ ಕ್ರೈಸ್ತ ಯೋಜನೆ ಮತ್ತು ಪಂಚಮ ಪತ್ರಿಕೆ ಮುದ್ರಣ | ರೂ.38,00,000–00 |
| 9 | ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅನುದಾನ | ರೂ.13,87,915–00 |
| 10 | ಕೃಷಿ ಇಲಾಖೆ ಅನುದಾನ | ರೂ.17,47,940–00 |
| 11 | ಅಮೃತ ಮಹೋತ್ಸವದ 75 ಕಿರುಹೊತ್ತಿಗೆಗಳ ಪ್ರಕಟಣೆ | ರೂ.19,50,027–00 |
| 12 | ಅಮೃತ ಮಹೋತ್ಸವ ಕಾರ್ಯಕ್ರಮಗಳ ಅನುದಾನ | ರೂ.73,63,760–00 |
| 13 | ಕೋವಿಡ್–19 ಧನಸಹಾಯ | ರೂ.58,000–00 |
| 14 | ದತ್ತಿನಿಧಿಗಳ ಬಡ್ಡಿ ಮೊತ್ತ | ರೂ.2,26,944–00 |
| ಒಟ್ಟು ರೂ. | | ರೂ.3,52,99,928.13 |

## 2. ಪುಸ್ತಕ ಪ್ರಕಟಣ ಖಾತೆ

| ಕ್ರ.ಸಂ | 2021-22ನೇ ಸಾಲಿನ ಮುಂದುವರಿದ ಯೋಜನೆಗಳ ವಿವರ | ಬದ್ದ ವೆಚ್ಚ / ಒಟ್ಟಾರೆ ಮೊತ್ತ |
|---|---|---|
| 1 | ಪುಸ್ತಕ ಪ್ರಕಟಣೆ ಅನುದಾನ | ರೂ.94,78,461.56 |

## 3. ಪುಸ್ತಕ ಮಾರಾಟ ಖಾತೆ

| ಕ್ರ.ಸಂ | 2021-22ನೇ ಸಾಲಿನ ಮುಂದುವರಿದ ಯೋಜನೆಗಳ ವಿವರ | ಬದ್ದ ವೆಚ್ಚ / ಒಟ್ಟಾರೆ ಮೊತ್ತ |
|---|---|---|
| 1 | ಪುಸ್ತಕ ಮಾರಾಟ ಅನುದಾನ | ರೂ.28,22,993.55 |

ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

# 2022–23ನೇ ಸಾಲಿನ ನಿರೀಕ್ಷಿತ ಅನುದಾನ

| ಕ್ರ.ಸಂ. | ಅನುದಾನದ ವಿವರ | ಮೊತ್ತ |
|---|---|---|
| 1 | 2022–23ನೇ ಸಾಲಿನ ನಿರೀಕ್ಷಿತ ಯೋಜನೆ ಅನುದಾನ | ರೂ.1,00,00,000–00 |
| 2 | ಅನುದಾನ ಖಾತೆಯ ಬ್ಯಾಂಕ್ ಬಡ್ಡಿ /ವಿವಿಧ ಮೂಲಗಳಿಂದ | ರೂ.5,00,000–00 |
| 3 | ಪುಸ್ತಕ ಮಾರಾಟ ಖಾತೆ – 75 ಕಿರುಹೊತ್ತಿಗೆಗಳ ನಿರೀಕ್ಷಿತ ಮರುಮುದ್ರಣ | ರೂ.15,00,000–00 |
| | **ಒಟ್ಟು ರೂ.** | **ರೂ.1,20,00,000–00** |

ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಕರ್ನಾಟಕ ಸಾಹಿತ್ಯ ಅಕಾಡೆಮಿ

# 2022–23ನೇ ಸಾಲಿಗೆ ರೂಪಿಸಿರುವ ಕ್ರಿಯಾಯೋಜನೆ ರೂ.5,96,01,383.24

| ಕ್ರ. ಸಂ. | ಯೋಜನೆ ಲೆಕ್ಕಶೀರ್ಷಿಕೆ | ನಿಗದಿಪಡಿಸಿದ ಅಂದಾಜು ಮೊತ್ತ | ಕಾರ್ಯಕ್ರಮದ ಸ್ವರೂಪ |
|---|---|---|---|
| 1 | **2021–22ನೇ ಸಾಲಿನ ಪ್ರಶಸ್ತಿ / ಬಹುಮಾನ**<br><br>2021–22ನೇ ಸಾಲಿನ ಉಳಿಕೆ ಮೊತ್ತ **ರೂ.25,00,000/–**<br><br>1. ವಜ್ರದ ಬೇರುಗಳು ಮಾಲೆ ಯೋಜನೆಯಿಂದ **ರೂ.2,00,000/–**<br>2. ಕನ್ನಡ ಸಾಹಿತ್ಯದಲ್ಲಿ ಜೀವನ ಮೌಲ್ಯ ಮಾಲೆ ಯೋಜನೆಯಿಂದ **ರೂ.1,00,000/–**<br>3. ಉದ್ಯೋಗಮುಖಿ ಕನ್ನಡ ಯೋಜನೆಯಿಂದ **ರೂ.1,00,000/–**<br><br>➢ 2021ನೇ ಸಾಲಿನ ಗೌರವ ಪ್ರಶಸ್ತಿ ಪ್ರಶಸ್ತಿ ಮೊತ್ತ ರೂ.50,000–00<br>➢ 2021ನೇ ಸಾಲಿನ ಸಾಹಿತ್ಯಶ್ರೀ ಪ್ರಶಸ್ತಿ ಮೊತ್ತ ರೂ.25,000–00<br>➢ 2020ನೇ ಸಾಲಿನ ಪುಸ್ತಕ ಬಹುಮಾನ ಮೊತ್ತ ರೂ.25,000–00<br>➢ 2020ನೇ ಸಾಲಿನ ಪುಸ್ತಕ ದತ್ತಿ ಬಹುಮಾನ<br>(10 ದತ್ತಿನಿಧಿಗಳಿಂದ ಬಂದ ಬಡ್ಡಿ ಮೊತ್ತ) | **ರೂ.29,00,000/–** | ➢ ಸಾಹಿತ್ಯ ಕ್ಷೇತ್ರದಲ್ಲಿ ಅಪೂರ್ವ ಸೇವೆ ಸಲ್ಲಿಸಿರುವ 05 ಜನ ಗಣ್ಯ ಸಾಹಿತಿಗಳಿಗೆ **ಗೌರವ ಪ್ರಶಸ್ತಿ** ಮತ್ತು 10 ಜನರಿಗೆ **ಸಾಹಿತ್ಯಶ್ರೀ** ಪ್ರಶಸ್ತಿ – ಬಹುಮಾನದೊಂದಿಗೆ ಕಂಚಿನ ಪ್ರತಿಮೆ, ಪ್ರಶಸ್ತಿ ಪತ್ರ, ಶಾಲು, ಹಾರ, ಫಲತಾಂಬೂಲ ನೀಡಿ ಗೌರವಿಸಲಾಗುವುದು. ಊಟ, ವಸತಿ, ವ್ಯವಸ್ಥೆಯೊಂದಿಗೆ ಪ್ರಯಾಣಭತ್ಯೆ, ನೀಡಲಾಗುವುದು. ಕನ್ನಡ ಸಾಹಿತ್ಯದ 19 ಪ್ರಕಾರಗಳ ಅತ್ಯುತ್ತಮ ಕೃತಿಗಳಿಗೆ **ಪುಸ್ತಕ ಬಹುಮಾನ** ಹಾಗೂ **ದತ್ತಿ ಬಹುಮಾನಿತ ಕೃತಿ**ಗಳಿಗೆ ಬಹುಮಾನಗಳೊಂದಿಗೆ, ಪ್ರಶಸ್ತಿ ಫಲಕ, ಶಾಲು, ಹಾರ, ಫಲತಾಂಬೂಲ ನೀಡಿ ಪುರಸ್ಕರಿಸಲಾಗುವುದು. ಬಹುಮಾನಿತರಿಗೆ ವಸತಿ ವ್ಯವಸ್ಥೆಯೊಂದಿಗೆ ಪ್ರಯಾಣಭತ್ಯೆ ನೀಡುವುದು. ಪುಸ್ತಕ ಬಹುಮಾನ ಮತ್ತು ದತ್ತಿ ಬಹುಮಾನದ ಪುಸ್ತಕಗಳ ವಿಮರ್ಶಕರಿಗೆ ಗೌರವ ಸಂಭಾವನೆ ನೀಡುವುದು. ಕಾರ್ಯಕ್ರಮಕ್ಕೆ ಆಗಮಿಸಿದ ವಿಮರ್ಶಕರಿಗೆ ಊಟ ಹಾಗೂ ವಸತಿ ವ್ಯವಸ್ಥೆಯೊಂದಿಗೆ ಪ್ರಯಾಣಭತ್ಯೆ ನೀಡುವುದು. ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಸಂಬಂಧ ಆಹ್ವಾನ ಪತ್ರಿಕೆ, ಪರಿಚಯ ಪುಸ್ತಕ, ವೇದಿಕೆ ಅಲಂಕಾರ, ಊಟೋಪಹಾರ, ಹಿಂದಿನ ವರ್ಷದ ಪ್ರಶಸ್ತಿ ಬಾಕಿ ವೆಚ್ಚ ಮತ್ತು ಇತರೆ ಖರ್ಚುಗಳನ್ನು ಭರಿಸುವುದು. ಈ ಸಮಾರಂಭವನ್ನು ಸಮಿತಿಯು ನಿರ್ಧರಿಸಿದ ಸ್ಥಳದಲ್ಲಿ ನಡೆಸಲಾಗುವುದು. |

| | | | |
|---|---|---|---|
| 2 | **2022-2023ನೇ ಸಾಲಿನ ಪ್ರಶಸ್ತಿ / ಬಹುಮಾನ**<br><br>1. 2022ನೇ ಸಾಲಿನ ಗೌರವ ಪ್ರಶಸ್ತಿ ಪ್ರಶಸ್ತಿ ಮೊತ್ತ ರೂ.50,000-00<br>2. 2022ನೇ ಸಾಲಿನ ಸಾಹಿತ್ಯಶ್ರೀ ಪ್ರಶಸ್ತಿ ಮೊತ್ತ ರೂ.25,000-00<br>3. 2021ನೇ ಸಾಲಿನ ಪುಸ್ತಕ ಬಹುಮಾನ ಪ್ರಶಸ್ತಿ ಮೊತ್ತ ರೂ.25,000-00<br>4. 2021ನೇ ಸಾಲಿನ ಪುಸ್ತಕ ದತ್ತಿ ಬಹುಮಾನ<br>**(10 ದತ್ತಿನಿಧಿಗಳಿಂದ ಬಂದ ಬಡ್ಡಿ ಮೊತ್ತ)** | **ರೂ.30,00,000/-** | ➢ ಸಾಹಿತ್ಯ ಕ್ಷೇತ್ರದಲ್ಲಿ ಅಪೂರ್ವ ಸೇವೆ ಸಲ್ಲಿಸಿರುವ 05 ಜನ ಗಣ್ಯ ಸಾಹಿತಿಗಳಿಗೆ **ಗೌರವ ಪ್ರಶಸ್ತಿ** ಮತ್ತು 10 ಜನರಿಗೆ **ಸಾಹಿತ್ಯಶ್ರೀ** ಪ್ರಶಸ್ತಿ – ಬಹುಮಾನದೊಂದಿಗೆ ಕಂಚಿನ ಪ್ರತಿಮೆ, ಪ್ರಶಸ್ತಿ ಪತ್ರ, ಶಾಲು, ಹಾರ, ಫಲತಾಂಬೂಲ ನೀಡಿ ಗೌರವಿಸಲಾಗುವುದು. ಊಟ, ವಸತಿ, ವ್ಯವಸ್ಥೆಯೊಂದಿಗೆ ಪ್ರಯಾಣಭತ್ಯೆ, ನೀಡಲಾಗುವುದು. ಕನ್ನಡ ಸಾಹಿತ್ಯದ 19 ಪ್ರಕಾರಗಳ ಅತ್ಯುತ್ತಮ ಕೃತಿಗಳಿಗೆ **ಪುಸ್ತಕ ಬಹುಮಾನ** ಹಾಗೂ **ದತ್ತಿ ಬಹುಮಾನಿತ ಕೃತಿ**ಗಳಿಗೆ ಬಹುಮಾನಗಳೊಂದಿಗೆ, ಪ್ರಶಸ್ತಿ ಫಲಕ, ಶಾಲು, ಹಾರ, ಫಲತಾಂಬೂಲ ನೀಡಿ ಪುರಸ್ಕರಿಸಲಾಗುವುದು. ಬಹುಮಾನಿತರಿಗೆ ವಸತಿ ವ್ಯವಸ್ಥೆಯೊಂದಿಗೆ ಪ್ರಯಾಣಭತ್ಯೆ ನೀಡುವುದು. ಪುಸ್ತಕ ಬಹುಮಾನ ಮತ್ತು ದತ್ತಿ ಬಹುಮಾನದ ಪುಸ್ತಕಗಳ ವಿಮರ್ಶಕರಿಗೆ ಗೌರವ ಸಂಭಾವನೆ ನೀಡುವುದು. ಕಾರ್ಯಕ್ರಮಕ್ಕೆ ಆಗಮಿಸಿದ ವಿಮರ್ಶಕರಿಗೆ ಊಟ ಹಾಗೂ ವಸತಿ ವ್ಯವಸ್ಥೆಯೊಂದಿಗೆ ಪ್ರಯಾಣಭತ್ಯೆ ನೀಡುವುದು. ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಸಂಬಂಧ ಆಹ್ವಾನ ಪತ್ರಿಕೆ, ಪರಿಚಯ ಪುಸ್ತಕ, ವೇದಿಕೆ ಅಲಂಕಾರ, ಊಟೋಪಹಾರ ಮತ್ತು ಇತರೆ ಖರ್ಚುಗಳನ್ನು ಭರಿಸುವುದು. ಈ ಸಮಾರಂಭವನ್ನು ಸಮಿತಿಯು ನಿರ್ಧರಿಸಿದ ಸ್ಥಳದಲ್ಲಿ ನಡೆಸಲಾಗುವುದು. |
| 3 | **ಕಾರ್ಯಕ್ರಮ**<br><br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.20,00,000/-**<br><br>1. 2021-22ನೇ ಸಾಲಿನ ಉಳಿಕೆ ಮೊತ್ತ **ರೂ.5,05,767/-**<br>2. ದೇಸಿ ದರ್ಶನ ಮಾಲೆ ಯೋಜನೆಯಿಂದ **ರೂ.1,00,000/-**<br>3. ಪಂಚಮ ಪತ್ರಿಕೆ ಪ್ರಕಟಣಾ ಯೋಜನೆಯಿಂದ **ರೂ.1,00,000/-** | **ರೂ.27,05,767/-** | ➢ ಸಾಹಿತ್ಯದ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಗೋಷ್ಠಿ, ಸಂವಾದಗೋಷ್ಠಿ ಹಾಗೂ ಚರ್ಚೆಗಳನ್ನು ನಡೆಸುವುದು.<br>➢ ರಾಜ್ಯ/ ವಿಭಾಗ ಮಟ್ಟದಲ್ಲಿ ಕಮ್ಮಟ/ ಶಿಬಿರಗಳನ್ನು 2-10ದಿನಗಳ ಕಾಲ ನಡೆಸುವುದು. ರಾಜ್ಯದ ಎಲ್ಲಾ ಸಂಶೋಧನಾರ್ಥಿಗಳನ್ನು ಒಳಗೊಂಡಂತೆ ರಾಜ್ಯಮಟ್ಟದ ಸಂಶೋಧನಾ ಕಮ್ಮಟ ನಡೆಸುವುದು. ವಿಶೇಷ ಸಂದರ್ಭದಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದು.<br>➢ ಕಾಲೇಜು ವಿದ್ಯಾರ್ಥಿಗಳಿಗಾಗಿ ರಾಜ್ಯದಾದ್ಯಂತ ಹದಿಹರಿಯಕ್ಕೆ ಸಾಹಿತ್ಯ ಸುಧೆ ಆಯೋಜಿಸುವುದು. ಒಂದೊಂದು ಕಾರ್ಯಕ್ರಮದಲ್ಲಿ 100-150 ಆಸಕ್ತ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ.<br>➢ ಈ ಕಾರ್ಯಕ್ರಮಗಳಲ್ಲಿ ಮಂಡಿತವಾಗುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಮತ್ತು ವಿದ್ವಾಂಸರ ಗೌರವ ಸಂಭಾವನೆ, ಶಿಬಿರಾರ್ಥಿಗಳ ಪ್ರೋತ್ಸಾಹಧನ, ಪ್ರಯಾಣ ಭತ್ಯೆ, ಊಟೋಪಹಾರ, ವಸತಿ ವೆಚ್ಚ, ಅಧ್ಯಕ್ಷರು/ರಿಜಿಸ್ಟ್ರಾರ್ ಮತ್ತು ಸಿಬ್ಬಂದಿಗಳ ಪ್ರಯಾಣಭತ್ಯೆ, ದಿನಭತ್ಯೆ ಮತ್ತು ಕಾರ್ಯಕ್ರಮದ ಆಹ್ವಾನ ಪತ್ರಿಕೆ, ಕಾರ್ಯಕ್ರಮಕ್ಕೆ ಬಳಸಿದ ವಾಹನ ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು.<br>➢ 2021-22ನೇ ಸಾಲಿನಲ್ಲಿ ನಡೆದ ಕಾರ್ಯಕ್ರಮ/ಕಮ್ಮಟ/ಶಿಬಿರಗಳ ಬಾಕಿ ವೆಚ್ಚ ಪಾವತಿ. |

| | | | |
|---|---|---|---|
| 4 | **ಹೊರನಾಡು ಕಾರ್ಯಕ್ರಮ**<br><br>2021-22ನೇ ಸಾಲಿನ<br>ಉಳಿಕೆ ಮೊತ್ತ **ರೂ.6,49,096/-** | **ರೂ.6,49,096/-** | ➤ ಹೊರನಾಡಿನಲ್ಲಿರುವ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಅಲ್ಲಿನ ಕನ್ನಡ ಲೇಖಕರನ್ನು ಒಳಗೊಂಡಂತೆ ಕನ್ನಡದೊಂದಿಗಿನ ಇತರ ಭಾಷೆಗಳ ಬಾಂಧವ್ಯ, ಕನ್ನಡಿಗರ ಸಮಸ್ಯೆಗಳು ಹಾಗೂ ಸಾಹಿತ್ಯಿಕ ವಿಚಾರಗಳನ್ನು ಕುರಿತು ವಿಚಾರ ಸಂಕಿರಣ/ ಕನ್ನಡ ಕಾವ್ಯಗೋಷ್ಟಿ/ ಸಂವಾದ ಗೋಷ್ಠಿ ಹಾಗೂ ಕಮ್ಮಟಗಳನ್ನು ನಡೆಸುವುದು.<br>➤ ಈ ಕಾರ್ಯಕ್ರಮಗಳಲ್ಲಿ ಮಂಡಿತವಾಗುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಮತ್ತು ವಿದ್ವಾಂಸರ ಗೌರವ ಸಂಭಾವನೆ, ಶಿಬಿರಾರ್ಥಿಗಳ ಪ್ರೋತ್ಸಾಹಧನ, ಪ್ರಯಾಣ ಭತ್ಯೆ, ಊಟೋಪಹಾರ, ವಸತಿ ವೆಚ್ಚ, ಅಧ್ಯಕ್ಷರು/ರಿಜಿಸ್ಟ್ರಾರ್ ಮತ್ತು ಸಿಬ್ಬಂದಿಗಳ ಪ್ರಯಾಣಭತ್ಯೆ, ದಿನಭತ್ಯೆ ಮತ್ತು ಕಾರ್ಯಕ್ರಮದ ಆಹ್ವಾನ ಪತ್ರಿಕೆ, ಕಾರ್ಯಕ್ರಮಕ್ಕೆ ಬಳಸಿದ ವಾಹನ ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು |
| 5 | **ಧ್ವನಿ, ದೃಶ್ಯ, ಪಠ್ಯ, ದಾಖಲೀಕರಣ**<br><br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.8,00,000/-**<br><br>1. 2021-22ನೇ ಸಾಲಿನ ಉಳಿಕೆ ಮೊತ್ತ **ರೂ.3,55,069/-**<br>2. ಕನ್ನಡ ಸಾಹಿತ್ಯದಲ್ಲಿ ಜೀವನ ಮೌಲ್ಯ ಮಾಲೆಯಿಂದ **ರೂ.1,00,000/-**<br>3. ಲೌಕಿಕ ಪದವಿವರಣ ಕೋಶ ಯೋಜನೆಯಿಂದ **ರೂ.2,85,866/-**<br>4. ಕನ್ನಡ ಸಾಹಿತ್ಯದಲ್ಲಿ ಭಾರತದ ಪರಿಕಲ್ಪನೆ ಯೋಜನೆಯಿಂದ **ರೂ.1,00,000/-** | **ರೂ.16,40,935/-** | ➤ ಸಭಾಮನೆಗೆ ಸಂಬಂಧಿಸಿದ ಸೌಂಡ್ಸ್, ಲೈಟ್ಸ್, ಕ್ಯಾಮೆರಾ ಹಾಗೂ ಲ್ಯಾಪ್‌ಟಾಪ್,ಕಂಪ್ಯೂಟರ್ ಇತರೆ ಅಗತ್ಯ ಪರಿಕರಗಳ ಖರೀದಿ, ಅಕಾಡೆಮಿಯ ಯುಟ್ಯೂಬ್/ಫೇಸ್ ಬುಕ್ ಹಾಗೂ ಇತರ ಸಾಮಾಜಿಕ ಜಾಲತಾಣಗಳ ಮೂಲಕ ಇ-ಉಪನ್ಯಾಸ, ವೆಬಿನಾರ್, ಆನ್‌ಲೈನ್ ಕಮ್ಮಟಗಳು ಮತ್ತು ಹಳಗನ್ನಡ ಪಠ್ಯಗಳ ಓದು ವ್ಯಾಖ್ಯಾನಗಳನ್ನು ದೃಢೀಕರಿಸಿ ದಾಖಲೀಕರಿಸುವುದು.<br>➤ ವಿದ್ವಾಂಸರ ಸಂಭಾವನೆ, ಪ್ರಯಾಣ ಭತ್ಯೆ, ಮತ್ತು ಆಹ್ವಾನ ಪತ್ರಿಕೆ, ಕಾರ್ಯಕ್ರಮಕ್ಕೆ ಬಳಸಿದ ವಾಹನ ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು.<br>➤ 2021-22ನೇ ಸಾಲಿನ ಬಾಕಿ ಉಳಿದ ಬಿಲ್ಲುಗಳ ಬಾಕಿ ಮೊತ್ತದ ಪಾವತಿ. |

| | | | |
|---|---|---|---|
| 6 | **ಪ್ರಕಟಣೆ**<br><br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.12,00,000/-**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.14,83,920/-** | **ರೂ.26,83,920/-** | ➢ ಲೌಕಿಕ ಪದಕೋಶ ಮಾಲೆ, ವಿಶೇಷ ಪ್ರಕಟಣಾ ಮಾಲಿಕೆ, ವಿಚಾರ ಸಂಕಿರಣ, ವಾರ್ಷಿಕ ಸಂಕಲನಗಳು, ಮುಂದುವರಿದ ಪ್ರಕಟಣೆಗಳು, ಆನ್‌ಲೈನ್ ಸೇರಿದಂತೆ ವಿವಿಧ ಕಾರ್ಯಕ್ರಮಗಳ ಸಂಬಂಧ ಸಂಪಾದಿಸಿದ ಕೃತಿಗಳು, ಫೆಲೋಶಿಪ್ ಕೃತಿಗಳು, ಪ್ರವಾಸ ಕೃತಿಗಳು, ಅನಿಕೇತನ- ಕನ್ನಡ/ಇಂಗ್ಲೀಷ್ ತ್ರೈಮಾಸಿಕ ಪತ್ರಿಕೆ, ವಾರ್ತಾ ಪತ್ರ ಮತ್ತು ಇತರೆ ಪುಸ್ತಕಗಳ ಮುದ್ರಣ ವೆಚ್ಚ ಲೇಖಕರ/ ಸಂಪಾದಕರ ಸಂಭಾವನೆಯನ್ನು ಪಾವತಿಸುವುದು.<br>➢ 2021-22ನೇ ಸಾಲಿನ ಬಾಕಿ ಉಳಿದ ಬಿಲ್ಲುಗಳ ಬಾಕಿ ಮೊತ್ತದ ಪಾವತಿ.<br>➢ ಅನುದಾನ ಖಾತೆಯ ಮೊತ್ತ ಮುಗಿದ ನಂತರ ಪುಸ್ತಕ ಮಾರಾಟ ಖಾತೆಯಿಂದ ಭರಿಸಲಾಗುವುದು |
| 7 | **ಸಭೆ**<br><br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.1,00,000/-**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.47,212/-** | **ರೂ.1,47,212/-** | ➢ ಇಡೀ ವರ್ಷದಲ್ಲಿ ಪ್ರತಿ ತಿಂಗಳು ನಡೆಯುವ ಸ್ಥಾಯಿ ಸಮಿತಿ ಸಭೆ ಹಾಗೂ ನಾಲ್ಕು ತಿಂಗಳಿಗೊಮ್ಮೆ ನಡೆಯುವ ಸರ್ವ ಸದಸ್ಯರ ಸಭೆಗಳು, ಉಪಸಮಿತಿ ಸಭೆಗಳು ಹಾಗೂ ವಿಶೇಷ ಸಭೆಗಳಲ್ಲಿ ಭಾಗವಹಿಸುವ ಸದಸ್ಯರ ಸಭಾಭತ್ಯೆ, ದಿನಭತ್ಯೆ, ಪ್ರಯಾಣಭತ್ಯೆ ಈ ಶೀರ್ಷಿಕೆಯಿಂದ ಭರಿಸಲಾಗುವುದು. |
| 8 | **ಅಧ್ಯಕ್ಷರ ಸ್ವಂತ ವಿವೇಚನೆ ನಿಧಿ**<br><br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.50,000/-**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.1,11,806/-** | **ರೂ.1,61,806-00** | ➢ ಯಾವುದೇ ಸಂಘ ಸಂಸ್ಥೆಗಳು ನಡೆಸುವ ಸಾಹಿತ್ಯಕ ಕಾರ್ಯಕ್ರಮಗಳಿಗೆ ಗರಿಷ್ಟ ರೂ.10,000-00ಗಳ ಮಿತಿಗೊಳಪಟ್ಟಂತೆ ಮಾನ್ಯ ಅಧ್ಯಕ್ಷರು ತಮ್ಮ ವಿವೇಚನೆ ಅನುಸಾರ ನೀಡಲಾಗುವುದು. |

| | | | |
|---|---|---|---|
| 9 | **ಅಧ್ಯಕ್ಷರ ದಿನಭತ್ಯೆ/ಪ್ರಯಾಣಭತ್ಯೆ**<br><br>2022–23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.3,00,000/–**<br><br>2021–22ನೇ ಸಾಲಿನ ಉಳಿಕೆ ಮೊತ್ತ **ರೂ.89.289/–** | **ರೂ.3,89,289/–** | ➢ ಅಕಾಡೆಮಿ ಅಧ್ಯಕ್ಷರ ದೂರವಾಣಿ, ವಸತಿ ವೆಚ್ಚ, ಪ್ರಯಾಣಭತ್ಯೆ ಮತ್ತು ದಿನಭತ್ಯೆ. |
| 10 | **ಸಾಹಿತಿ ಮಾಹಿತಿ ಕೋಶ**<br><br>2021–22ನೇ ಸಾಲಿನ ಉಳಿಕೆ ಮೊತ್ತ **ರೂ.6,64,566/–** | **ರೂ.6,64,566/–** | ➢ ಬಂಗಾರದ ಎಲೆಗಳು ವಿಶೇಷ ಯೋಜನೆ– ಕ್ರಿ.ಶ.1820ರಿಂದ 2020ರ ವರೆಗಿನ ಕನ್ನಡದ ಸಾಹಿತಿಗಳ ಸಂಕ್ಷಿಪ್ತ ಪರಿಚಯವನ್ನು ದತ್ತ ನಮೂದು ಮಾಡಿ ಅಕಾಡೆಮಿಯ ಅಂತರ್ಜಾಲದಲ್ಲಿ ಪ್ರಕಟಿಸುವುದು. ಯೋಜನಾ ಸಂಪಾದಕರು ಸಂಪಾದಕರು/ಲೇಖಕರ ಸಂಭಾವನೆ, ಕ್ಷೇತ್ರಕಾರ್ಯ ಮಾಡುವವರ ಸಂಭಾವನೆ, ಅಂತರ್ಜಾಲ ಹೂಡಿಕೆ ವೆಚ್ಚ, ಅಕಾಡೆಮಿಯ ಅಂತರ್ಜಾಲದಲ್ಲಿ ಅಳವಡಿಸಲು ತಗಲುವ ವೆಚ್ಚ, ಸಭೆ ಹಾಗೂ ಇತರೆ ವೆಚ್ಚಗಳು. |
| 11 | **ವಜ್ರದ ಬೇರುಗಳು ಯೋಜನೆ**<br>1. 2021–22ನೇ ಸಾಲಿನ ಉಳಿಕೆ ಮೊತ್ತ **ರೂ.10,13,848/–**<br>2. ಕನ್ನಡ ಸಾಹಿತ್ಯದಲ್ಲಿ ಭಾರತದ ಪರಿಕಲ್ಪನೆ ಯೋಜನೆಯಿಂದ **ರೂ.1,43,339/–** | **ರೂ.10,57,187/–** | ➢ ಪ್ರಾಚೀನ ಮತ್ತು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಮಾರು 18 ಸಾಹಿತ್ಯ ಪ್ರಕಾರಗಳನ್ನು ಗುರುತಿಸಿ ಪ್ರಕಟಿಸುವುದು. ಪುಸ್ತಕಗಳ ಮುದ್ರಣ ವೆಚ್ಚ ಲೇಖಕರ/ ಸಂಪಾದಕರ ಸಂಭಾವನೆ, ಸಭೆ ಹಾಗೂ ಇತರೆ ವೆಚ್ಚಗಳು.<br>➢ 2022–23ನೇ ಸಾಲಿನ 2021–22ನೇ ಸಾಲಿನ ಪ್ರಶಸ್ತಿ/ಬಹುಮಾನ ಲೆಕ್ಕ ಶೀರ್ಷಿಕೆ 01ಕ್ಕೆ **ರೂ.2,00,000/–**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. |
| 12 | **ದಲಿತ ಕ್ರೈಸ್ತರು ಸಾಂಸ್ಕೃತಿಕ ಶೋಧ ಮಾಲೆ ಮತ್ತು ಪಂಚಮ ಪತ್ರಿಕೆ ಮುದ್ರಣ ಯೋಜನೆ** | | **ದಲಿತ ಕ್ರೈಸ್ತರು ಸಾಂಸ್ಕೃತಿಕ ಶೋಧ ಮಾಲೆ**<br>**30,00,000 + 5,88,510 + 1,20,000 = 37,08,510/–**<br>➢ ಕರ್ನಾಟಕದಲ್ಲಿನ ಮತಾಂತರ ಹೊಂದಿದ ದಲಿತರ ಕುರಿತ ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಷಯಕ್ಕೆ ಸಂಬಂಧಿಸಿದಂತೆ ಆದ ಬದಲಾವಣೆ ಮತ್ತು ಸ್ಥಿತಿಗತಿಗಳ ಕುರಿತ ಅಧ್ಯಯನ ಮಾಡುವುದಾಗಿದೆ. ಸಾಮಾನ್ಯ ಯೋಜನೆಯ 09 ಜನ ಲೇಖಕರಿಗೆ ಸಾಮಾನ್ಯ ಯೋಜನೆಯ ಹಣದಿಂದ, ಪರಿಶಿಷ್ಟ ಪಂಗಡದ 02 ಜನ ಲೇಖಕರಿಗೆ ಗಿರಿಜನ ಉಪಯೋಜನೆಯ ಹಣದಿಂದ, ಪರಿಶಿಷ್ಟ ಜಾತಿಯ 19 ಜನ ಲೇಖಕರಿಗೆ ವಿಘಯೋ ಅನುದಾನದ ಹಣದಿಂದ ಸಂಭಾವನೆ, ಸಭಾ ಭತ್ಯೆ ಇನ್ನಿತರ ವೆಚ್ಚಗಳನ್ನು ಭರಿಸುವುದು. ಈ ಅಧ್ಯಯನದ 10 ಸಂಪುಟಗಳ ಮುದ್ರಣ ವೆಚ್ಚ, ಸಲಹಾ ಸಮಿತಿ ಸದಸ್ಯರು, ವಿಭಾಗವಾರು ಸಂಪಾದಕರು ಮತ್ತು ಜಿಲ್ಲಾವಾರು ಲೇಖಕರು/ ಕ್ಷೇತ್ರ ತಜ್ಞರ ಸಂಭಾವನೆ, ಸಭೆ ಹಾಗೂ ಇತರೆ ವೆಚ್ಚಗಳು. |

| | | | |
|---|---|---|---|
| | 1. 2020-21ನೇ ಸಾಲಿನಲ್ಲಿ ಬಿಡುಗಡೆಯಾದ ವಿಫಯೋ ಅನುದಾನದ ಉಳಿಕೆ **ರೂ.38,00,000/-**<br><br>2. 2021-22ನೇ ಸಾಲಿನ ದಲಿತ ಕ್ರೈಸ್ತ ಯೋಜನೆಯ ಸಾಮಾನ್ಯ ಅನುದಾನದ ಉಳಿಕೆ ಮೊತ್ತ **ರೂ.5,88,510/-**<br><br>3. 2022-23ನೇ ಸಾಲಿನ ಗಿರಿಜನ ಉಪಯೋಜನೆ ಶೀರ್ಷಿಕೆಯಿಂದ **ರೂ.1,20,000/-**<br><br>4. 2021-22ನೇ ಸಾಲಿನ ಪಂಚಮ ಪ್ರಕಟಣಾ ಯೋಜನೆಯ ಸಾಮನ್ಯ ಅನುದಾನದ ಉಳಿಕೆ ಮೊತ್ತ **ರೂ.3,00,000/-** | **ರೂ.45,08,510/-** | **ಪಂಚಮ ಪತ್ರಿಕೆ ಮುದ್ರಣ 8,00,000/-**<br>➢ ಪಂಚಮ ಪತ್ರಿಕೆಯ ಚದುರಿಹೋಗಿರುವ ಪ್ರಮುಖ ಸಂಚಿಕೆಗಳನ್ನು ಒಗ್ಗೂಡಿಸುವುದು ಹಾಗು ಈ ಕುರಿತು ಲೇಖನಗಳನ್ನು ಬರೆಸಿ ಪ್ರಕಟಿಸುವುದು, ಮುದ್ರಣ ವೆಚ್ಚ, ಲೇಖಕರ/ಸಂಪಾದಕರ ಸಂಭಾವನೆಯನ್ನು ಪಾವತಿಸುವುದು.<br>➢ 2022-23ನೇ ಸಾಲಿನ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ 3ಕ್ಕೆ **ರೂ.1,00,000/-** ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ.<br>➢ 2022-23ನೇ ಸಾಲಿನ ಉದ್ಯೋಗಮುಖಿ ಯೋಜನೆ ಲೆಕ್ಕ ಶೀರ್ಷಿಕೆ 15ಕ್ಕೆ **ರೂ.1,00,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ.<br>➢ 2022-23ನೇ ಸಾಲಿನ ಸಾದಿಲ್ವಾರು ಲೆಕ್ಕ ಶೀರ್ಷಿಕೆ 20ಕ್ಕೆ **ರೂ.1,00,000/-** ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. |
| 13 | **ದೇಸೀ ದರ್ಶನ ಮಾಲೆ**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.9,68,012/-** | **ರೂ.8,68,012/-** | ➢ ಕನ್ನಡ ಸಾಹಿತ್ಯವನ್ನು ವಿಮರ್ಶೆ ಮಾಡಲು ಬೇಕಾಗಿರುವ ದೇಸೀ ವಿಮರ್ಶಾ ಪರಿಕಲ್ಪನೆಗಳ ಮಾಲೆಯನ್ನು ರೂಪಿಸಲು ಆಯಾ ಕ್ಷೇತ್ರ ತಜ್ಞರಿಂದ ಶಾಕ್ತದಿಂದ ಚಾರ್ವಾಕದವರೆಗೆ ಹಲವು ನೆಲೆಯ ದೇಸೀ ವಿಮರ್ಶಾ ಪರಿಕಲ್ಪನೆಗಳನ್ನು ಕುರಿತು 15 ಸಂಪುಟಗಳಲ್ಲಿ ಪುಸ್ತಕಗಳನ್ನು ಹೊರತರುವುದು. ಸಂಪಾದಕರ ಸಂಭಾವನೆ, ಲೇಖಕರ ಸಂಭಾವನೆ, ಮುದ್ರಣ ವೆಚ್ಚ, ಸಭಾವೆಚ್ಚ ಇತ್ಯಾದಿಗಳನ್ನು ಭರಿಸುವುದು.<br>➢ 2022-23ನೇ ಸಾಲಿನ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ 3ಕ್ಕೆ **ರೂ.1,00,000/-** ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. |
| 14 | **ಕನ್ನಡ ಸಾಹಿತ್ಯದಲ್ಲಿ ಜೀವನ ಮೌಲ್ಯ ಮಾಲೆ**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.12,35,000/-** | **ರೂ.10,35,000/-** | ➢ ಶಾಸನ, ಜನಪದ ಸಾಹಿತ್ಯ, ಪಂಪಪೂರ್ವ ಯುಗದಿಂದ ಇಂದಿನ ಆಧುನಿಕ ಕನ್ನಡ ಸಾಹಿತ್ಯದವರೆಗೆ ಸಾಹಿತ್ಯ ಪ್ರತಿಪಾದಿಸಿಕೊಂಡು ಬಂದಿರುವ ಜೀವನ ಮೌಲ್ಯಗಳನ್ನು 18ಸಂಪುಟಗಳಲ್ಲಿ ಪುಸ್ತಕಗಳನ್ನು ಹೊರತರುವುದು. ಸಂಪಾದಕರ ಸಂಭಾವನೆ, ಲೇಖಕರ ಸಂಭಾವನೆ, ಮುದ್ರಣ ವೆಚ್ಚ, ಸಭಾವೆಚ್ಚ ಇತ್ಯಾದಿಗಳನ್ನು ಭರಿಸುವುದು.<br>➢ 2022-23ನೇ ಸಾಲಿನ ಧ್ವನಿ, ದೃಶ್ಯ, ಪಠ್ಯ, ದಾಖಲೀಕರಣ ಲೆಕ್ಕ ಶೀರ್ಷಿಕೆ 5ಕ್ಕೆ **ರೂ.1,00,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ.<br>➢ 2022-23ನೇ ಸಾಲಿನ 2021-22ನೇ ಸಾಲಿನ ಪ್ರಶಸ್ತಿ/ಬಹುಮಾನ ಲೆಕ್ಕ ಶೀರ್ಷಿಕೆ 01ಕ್ಕೆ **ರೂ.1,00,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ.<br>➢ ಯೋಜನೆ ಅನುದಾನ ಖಾತೆಯ ಮೊತ್ತ ಮುಗಿದ ನಂತರ ಪುಸ್ತಕ ಮಾರಾಟ ಖಾತೆಯಿಂದ ಭರಿಸಲಾಗುವುದು. |

| | | | |
|---|---|---|---|
| 15 | **ಉದ್ಯೋಗಮುಖಿ ಕನ್ನಡ**<br>1. 2021-22ನೇ ಸಾಲಿನ ಉಳಿಕೆ ಮೊತ್ತ **ರೂ.4,81,276/-**<br>2. ಜ್ಞಾನಪೀಠ ಪ್ರಶಸ್ತಿ ವಿಜೇತರ ಮಾಲೆ ಯೋಜನೆಯಿಂದ **ರೂ.1,50,000/-**<br>3. ಪಂಚಮ ಪತ್ರಿಕೆ ಪ್ರಕಟಣಾ ಯೋಜನೆಯಿಂದ **ರೂ.1,00,000/-** | **ರೂ.7,31,276/-** | ➢ ಕೆ.ಎ.ಎಸ್., ಐ.ಎ.ಎಸ್. ಪದವಿ ಕಾಲೇಜು, ಸಹಾಯಕ ಪ್ರಾಧ್ಯಾಪಕರು, ಪದವಿಪೂರ್ವ ಕಾಲೇಜು ಉಪನ್ಯಾಸಕರು ನೆಟ್ ಕೆ-ಸೆಟ್ ಮುಂತಾದ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗುವಂತೆ ಹಾಗು ಎಲ್ಲಾ ಸಾಹಿತ್ಯ ಓದುಗರಿಗು ಪೂರಕವಾಗುವಂತೆ ಈ ಪರೀಕ್ಷೆಗಳ ಪಠ್ಯಕ್ರಮಕ್ಕೆ ಪೂರಕವಾಗಿ ಸಾಹಿತ್ಯ, ಭಾಷಾ ವಿಜ್ಞಾನ, ಛಂದಸ್ಸು, ಕಾವ್ಯ ಮೀಮಾಂಸೆ, ವಿಮರ್ಶೆ ಮುಂತಾದ ವಿಷಯಗಳ ಬಗ್ಗೆ ಆನ್‌ಲೈನ್‌ನಲ್ಲಿ ಏರ್ಪಡಿಸುವ ಉಪನ್ಯಾಸಗಳನ್ನು ಸಂಪಾದಿಸಿ ಪುಸ್ತಕ ರೂಪದಲ್ಲಿ ಹೊರತರುವುದು ಮುದ್ರಣ ವೆಚ್ಚ ಸಂಪಾದಕರ ಸಂಭಾವನೆ<br>➢ 2022-23ನೇ ಸಾಲಿನ 2021-22ನೇ ಸಾಲಿನ ಪ್ರಶಸ್ತಿ/ಬಹುಮಾನ ಲೆಕ್ಕ ಶೀರ್ಷಿಕೆ 01ಕ್ಕೆ **ರೂ.1,00,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. |
| 16 | **ಸಂಚಿತ ಸಿಬ್ಬಂದಿ ವೇತನ**<br>ಬ್ಯಾಂಕ್ ಬಡ್ಡಿ ಮೊತ್ತದಿಂದ **ರೂ.3,50,000/-**<br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.46,077/-** | **ರೂ.3,96,077/-** | ➢ 2022-23ನೇ ಸಾಲಿನಲ್ಲಿ ಕಚೇರಿಯಲ್ಲಿರುವ ಪುಸ್ತಕ ಮಾರಾಟ ಸಹಾಯಕರ ಸಂಚಿತ ವೇತನ ಪಾವತಿ. |
| 17 | **ಹೊರಗುತ್ತಿಗೆ ಸಿಬ್ಬಂದಿ ವೇತನ**<br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.13,00,000/-**<br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.2,74,466/-** | **ರೂ.14,74,466/-** | ➢ 2022-23ನೇ ಸಾಲಿನಲ್ಲಿ ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಕಟಣೆ ಸಹಾಯಕ, ಲೆಕ್ಕಪತ್ರ ಸಹಾಯಕ, ಡಿ.ಟಿ.ಪಿ ಆಪರೇಟರ್, ಡಿ-ಗ್ರೂಪ್ ನೌಕರರ ವೇತನ ಪಾವತಿ.<br>➢ 2022-23ನೇ ಸಾಲಿನ ಸರ್ವಸದ್ಯಸರ / ಸ್ಥಾಯಿ ಸಮಿತಿ ಸಭೆ ಲೆಕ್ಕ ಶೀರ್ಷಿಕೆ 01ಕ್ಕೆ **ರೂ.1,00,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. |
| 18 | **ಹೊರಗುತ್ತಿಗೆ ಕಾರಿನ ಬಾಡಿಗೆ**<br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.9,50,000/-**<br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.70,939/-** | **ರೂ.10,20,939/-** | ➢ ಕಚೇರಿಗೆ ಸಂಬಂಧಪಟ್ಟ ಕೆಲಸಕಾರ್ಯಗಳ ಸ್ಥಳೀಯ ಓಡಾಟಕ್ಕೆ ಅಧ್ಯಕ್ಷರು / ರಿಜಿಸ್ಟ್ರಾರ್ ರವರಿಗೆ ಸರ್ಕಾರ ನಿಗದಿಪಡಿಸಿರುವ ದರಪಟ್ಟಿಯಂತೆ ಖಾಸಗಿ ಸಂಸ್ಥೆಯಿಂದ ಪಡೆಯುವ ಸ್ಥಳಿಯ ಕಾರಿನ ಬಾಡಿಗೆ ಬಾಬ್ತು |

| | | | |
|---|---|---|---|
| 19 | **ಅಂಚೆ ಚೀಟಿ, ಕೊರಿಯರ್, ಫ್ರಾಂಕಿಂಗ್**<br><br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ ಬ್ಯಾಂಕ್ ಬಡ್ಡಿ ಮೊತ್ತದಿಂದ **ರೂ.1,50,000/-**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.46,238/-** | **ರೂ.1,96,238/-** | ➢ ಕಚೇರಿಯ ದೈನಂದಿನ ಪತ್ರ ವ್ಯವಹಾರ, ಕಾರ್ಯಕ್ರಮಗಳ ಆಹ್ವಾನ ಪತ್ರಿಕೆ ರವಾನೆ, ವಾರ್ಷಿಕ ನಿರ್ವಹಣೆ ವೆಚ್ಚ, ತುರ್ತು ಸಂದರ್ಭದಲ್ಲಿ ಪತ್ರಗಳನ್ನು ಕೊರಿಯರ್ ಮೂಲಕ ಕಳುಹಿಸುವ ವೆಚ್ಚ ಭರಿಸಲಾಗುವುದು. |
| 20 | **ಸಾದಿಲ್ವಾರು**<br><br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.2,00,000/-**<br><br>1. 2021-22ನೇ ಸಾಲಿನ ಉಳಿಕೆ ಮೊತ್ತ **ರೂ.83,116/-**<br>2. ಬ್ಯಾಂಕ್ ಬಡ್ಡಿಯಿಂದ ರೂ.75,511/-<br>3. ಕಾರ್ಯಕ್ರಮ ಉಳಿಕೆ **ರೂ.8,080/-**<br>4. ಸಾಹಿತಿ-ಸಾಹಿತ್ಯ ದರ್ಶಿನಿ ಯೋಜನೆಯಿಂದ **ರೂ.1,22,900/-**<br>5. ಪಂಚಮ ಪತ್ರಿಕೆ ಪ್ರಕಟಣಾ ಯೋಜನೆಯಿಂದ **ರೂ.1,00,000/-** | **ರೂ.5,89,607.13** | ➢ ಕಚೇರಿಗೆ ಬೇಕಾಗುವ ಬರವಣಿಗೆ ಪ್ಯಾಡ್, ಅಧ್ಯಕ್ಷರು/ ರಿಜಿಸ್ಟ್ರಾರ್‌ರವರ ಲೆಟರ್ ಹೆಡ್ ಹಾಳೆ, ಟಿಪ್ಪಣಿ ಹಾಳೆ, ಅಕಾಡೆಮಿಯ ಪುಸ್ತಕಗಳ ಪಟ್ಟಿ. ಮುದ್ರಣ ವೆಚ್ಚ,<br>➢ ಲೇಖನ ಸಾಮಗ್ರಿ, ಪೀಠೋಪಕರಣ, ಲ್ಯಾಪ್ ಟಾಪ್, ಸ್ಕ್ಯಾನರ್ ಇನ್ನಿತರ ಸಾಮಾಗ್ರಿ ಖರೀದಿ, / ಕಚೇರಿಯಲ್ಲಿ ಕುಡಿಯಲು ನೀರು, ಟೀ, ಕಾಫಿ ಸರಬರಾಜು ಬಾಬ್ತು, ದಿನಪತ್ರಿಕೆ ಖರೀದಿ ಬಾಬ್ತು, / ಸಭೆಗಳಲ್ಲಿ ಭಾಗವಹಿಸುವ ಸದಸ್ಯರ ಉಪಹಾರ, ಊಟ, ಟೀ, ಕಾಫಿ, ನೀರು ವೆಚ್ಚ / ಕಚೇರಿ ಶುಚಿಗೊಳಿಸುವವರ ಸಂಭಾವನೆ,<br>➢ ಅಂತರಜಾಲ ವ್ಯವಸ್ಥೆ ಮತ್ತು ಕಂಪ್ಯೂಟರ್‌ನಲ್ಲಿ ಅಳವಡಿಸಬೇಕಾದ ತಂತ್ರಾಂಶಗಳು ಹಾಗೂ ವಾರ್ಷಿಕ ನಿರ್ವಹಣೆ, ಫ್ರಾಂಕಿಂಗ್ ಯಂತ್ರ /ಜೆರಾಕ್ಸ್ ಯಂತ್ರಗಳ ನಿರ್ವಹಣೆ ಹಾಗು ಕಾಟ್ರೇಜ್ ಮತ್ತು ಟ್ಯೂನರ್ ಖರೀದಿ/ ಕಚೇರಿಯ ದೈನಂದಿನ ಕೆಲಸಗಳಿಗೆ ಬಳಸುವ ಕಚೇರಿ ಮೊಬೈಲ್ ಮತ್ತು ದೂರವಾಣಿ ವೆಚ್ಚ ಹಾಗೂ ನಿರ್ವಹಣೆ, ಕಚೇರಿಯಲ್ಲಿ ಎಲೆಕ್ಟ್ರಿಕಲ್ ಕೆಲಸ ಬಾಬ್ತು ಭರಿಸುವುದು. ಕಚೇರಿ ಕೆಲಸಗಳಿಗಾಗಿ ರಿಜಿಸ್ಟ್ರಾರ್/ ಸಿಬ್ಬಂದಿಗಳ ಓಡಾಟ ವೆಚ್ಚ, ಇತರೆ ವೆಚ್ಚಗಳು.<br>➢ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿರುವ ಮಂಚಕ್ಕೆ ಬೆಡ್ ಮತ್ತು ಹೊದಿಕೆ ಇತ್ಯಾದಿ ಖರೀದಿ ವೆಚ್ಚ.<br>➢ 2021-22ನೇ ಸಾಲಿನ ಬಾಕಿ ಉಳಿದ ಬಿಲ್ಲುಗಳ ಬಾಕಿ ಮೊತ್ತದ ಪಾವತಿ. |

| | | | |
|---|---|---|---|
| 21 | **ಪುಸ್ತಕ ಉಗ್ರಾಣ**<br><br>2022-23ನೇ ಸಾಲಿಗೆ ನಿಗದಿಪಡಿಸಿದ ಮೊತ್ತ **ರೂ.1,00,000/-**<br><br>2021-22ನೇ ಸಾಲಿನ ಲೆಕ್ಕ ಶೀರ್ಷಿಕೆ 1ರ ಉಳಿಕೆ ಮೊತ್ತ **ರೂ.65,014/-** | **ರೂ.1,65,014/-** | ➢ ಇಲಾಖೆಯ ಸೆಲ್ಲರ್‌ನಲ್ಲಿ ಅಕಾಡೆಮಿಯ ಪುಸ್ತಕ ಸಂಗ್ರಹಣಕ್ಕಾಗಿ ಒಂದು ಅಂಕಣದ ಜಾಗದಲ್ಲಿ ಅಲ್ಯುಮಿನಿಯಂ ಪಾರ್ಟಿಷನ್ ಮಾಡಲು ಬೇಕಾಗುವ ಸಾಮಗ್ರಿ, ಪುಸ್ತಕಗಳನ್ನು ಜೋಡಿಸಲು ಬೇಕಾದ ಪೀಠೋಪಕರಣ, ಖರೀದಿ, ಉದ್ದೇಶಕ್ಕೆ.<br>➢ 2021-22ನೇ ಸಾಲಿನ ಬಾಕಿ ಉಳಿದ ಬಿಲ್ಲುಗಳ ಬಾಕಿ ಮೊತ್ತದ ಪಾವತಿ. |
| 22 | **ಇ-ಬುಕ್ ಮತ್ತು ಅಂತರ್ಜಾಲ ಪುಸ್ತಕ ಮಾರಾಟ**<br><br>1. 2021-22ನೇ ಸಾಲಿನ ಉಳಿಕೆ ಮೊತ್ತ **ರೂ.22,900/-**<br>2. ಸಾಹಿತಿ-ಸಾಹಿತ್ಯ ದರ್ಶಿನಿ ಯೋಜನೆಯಿಂದ **ರೂ.77,100/-** | **ರೂ.1,00,000/-** | ➢ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಿತ ಪುಸ್ತಕಗಳು ಇ-ಬುಕ್ ವ್ಯವಸ್ಥೆ ಮಾಡಲು<br>➢ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಿತ ಪುಸ್ತಕಗಳು ಅಂತರ್ಜಾಲ ಮೂಲಕ ಮಾರಾಟ ವ್ಯವಸ್ಥೆ ಮಾಡಲು ಸಾಫ್ಟ್‌ವೇರ್ ಸಿದ್ಧಪಡಿಸುವ ವೆಚ್ಚ ಭರಿಸಲಾಗುವುದು<br>➢ ಯೋಜನೆ ಅನುದಾನ ಖಾತೆಯ ಈ ಮೊತ್ತ ಮುಗಿದ ನಂತರ ಪುಸ್ತಕ ಮಾರಾಟ ಖಾತೆಯಿಂದ ಭರಿಸಲಾಗುವುದು. |
| 23 | **ತ.ರಾ.ಸು. ಅವರ ಸಮಗ್ರ ಸಾಹಿತ್ಯ ಪ್ರಕಟಣೆ**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.18,73,950/-** | **ರೂ.18,73,950/-** | ➢ ಇಂದಿನ ಯುವ ಜನಾಂಗವನ್ನು ಸಾಹಿತ್ಯ ವಲಯದತ್ತ ಸೆಳೆಯುವ ಹಾಗೂ ಸಾಹಿತ್ಯದ ಅಭಿರುಚಿಯನ್ನು ಬೆಳೆಸುವ ಸಲುವಾಗಿ ಹಾಗೂ ಅಧ್ಯಯನ ಹಾಗೂ ಆಕರ ಸಾಮಗ್ರಿಗಾಗಿ ತ.ರಾ.ಸು. ಅವರ ಸಮಗ್ರ ಸಾಹಿತ್ಯ ಒಂದೆಡೆ ಲಭ್ಯವಾದರೆ ಓದುಗರಿಗೆ/ ಸಾಹಿತ್ಯಾಸಕ್ತರಿಗೆ/ ವಿದ್ವಾಂಸರಿಗೆ/ ವಿಮರ್ಶಕರಿಗೆ ಹೆಚ್ಚಿನ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ತ.ರಾ.ಸು. ಅವರ ಜನ್ಮಶತಮಾನೋತ್ಸವದ ಅಂಗವಾಗಿ ಅವರ ಸಮಗ್ರ ಸಾಹಿತ್ಯವನ್ನು ಹೊರತರುವುದು. ಇದರ ಹಕ್ಕುದಾರರ ಸಂಭಾವನೆ, ಸಂಪಾದಕರ ಸಂಭಾವನೆ, ಕರಡಚ್ಚು ತಿದ್ದುವ ಸಂಭಾವನೆ, ಮುದ್ರಣ ವೆಚ್ಚಗಳ ಪಾವತಿ |
| 24 | **ಪಿ.ಹೆಚ್.ಡಿ/ಎಂ.ಫಿಲ್/ಸೃಜನೇತರ ಕೃತಿಗಳಿಗೆ ಸಹಾಯಧನ**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.40,000-00** | **ರೂ.40,000/-** | ➢ ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೋ ಆ ಉದ್ದೇಶಕ್ಕಾನುಗುಣವಾಗಿ ಇಲಾಖೆಯ ಆದೇಶಾನುಸಾರ ವೆಚ್ಚ ಮಾಡಲಾಗುವುದು. |

| | | | |
|---|---|---|---|
| 25 | **ಶ್ರೀಸಾಮಾನ್ಯರೆ ಅಸಾಮಾನ್ಯರ್ ಹಾಗು ಕೃಷಿ ಸಂಸ್ಕೃತಿ**<br><br>2021-22ನೇ ಸಾಲಿನಲ್ಲಿ ಬಿಡುಗಡೆಯಾದ ಕೃಷಿ ಇಲಾಖೆಯ ಅನುದಾನ ಮೊತ್ತದಲ್ಲಿ ಉಳಿಕೆ ಮೊತ್ತ **ರೂ.17,47,940/-** | **ರೂ.17,47,940/-** | ➢ ಕೃಷಿ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಉತ್ತೇಜಿಸುವ ಉದ್ದೇಶದಿಂದ ಕೃಷಿ ಸಂಸ್ಕೃತಿ ಶೀರ್ಷಿಕೆಯಡಿ ಕೃಷಿಯ ಮಹತ್ವ, ಕೃಷಿಯು ಸಾಹಿತ್ಯ, ಸಂಸ್ಕೃತಿ, ಕಲೆಯ ಮೇಲೆ ಬೀರಿರುವ ಪ್ರಭಾವವನ್ನು ಕುರಿತು ಪ್ರತಿ ಜಿಲ್ಲೆಯಿಂದ ಒಂದು ಆನ್‌ಲೈನ್ ವೆಬಿನಾರ್‌ಗಳನ್ನು ಸಂಘಟಿಸಲಾಗುತ್ತಿದೆ. ಈ ವೆಬಿನಾರ್‌ಗಳಲ್ಲಿ ಮಂಡಿತವಾಗುವ ಸುಮಾರು ನಲವತ್ತು ಪ್ರಬಂಧಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಹೊರತರಲು ಯೋಜಿಸಿದ್ದು, ಸಂಪಾದಕರು ಮತ್ತು ಸಂಪನ್ಮೂಲ ವ್ಯಕ್ತಿಗಳ ಸಂಭಾವನೆ, ಡಿಟಿಪಿ ವೆಚ್ಚ ಹಾಗೂ ಮುದ್ರಣ ವೆಚ್ಚ<br>➢ ಸಾವಯವ ಕೃಷಿ ಚಿಂತನೆ ಕುರಿತ ಕಾರ್ಯಕ್ರಮ ಸರಣಿಯ 150 ಎಪಿಸೋಡ್‌ನ ಲೇಖನಗಳನ್ನು ಸಂಕಲಿಸಿ ಅಂದಾಜು 500 ಪುಟಗಳ ಒಂದು ಪುಸ್ತಕ ಪ್ರಕಟಣೆಯ ವೆಚ್ಚ |
| 26 | **ಹಿರಿಯ ಸಾಹಿತಿಗಳ ಜನ್ಮಶತಮಾನೋತ್ಸವ**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.14,21,031/-**<br>1. ಬಿ.ಜಿ.ಎಲ್ ಸ್ವಾಮಿ,<br>2. ಸಿದ್ದಯ್ಯ ಪುರಾಣಿಕ್,<br>3. ಗೋಪಾಲಕೃಷ್ಣ ಅಡಿಗ,<br>4. ಟಿ.ಸುನಂದಮ್ಮ,<br>5. ಎಂ.ಕೆ. ಇಂದಿರಾ. ವಾಣಿ<br>6. ಇತರೆ ಸಾಹಿತಿಗಳು | **ರೂ.14,21,031/-** | ➢ ಹಿರಿಯ ಸಾಹಿತಿಗಳ ಜನ್ಮಶತಮಾನೋತ್ಸವ ವರ್ಷದ ಅಂಗವಾಗಿ ಅವರ ಸಾಹಿತ್ಯಕ ಸಾಧನೆಯನ್ನು ಕುರಿತು ವಿಚಾರ ಸಂಕಿರಣ, ಸಂವಾದ ಕಾರ್ಯಕ್ರಮಗಳನ್ನು ಅವರವರ ಜನ್ಮ ಸ್ಥಳಗಳಲ್ಲಿ ಹಾಗೂ ಇತರೆಡೆಗಳಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮಗಳಲ್ಲಿ ಮಂಡಿತವಾಗುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಮತ್ತು ವಿದ್ವಾಂಸರ ಸಂಭಾವನೆ, ಪ್ರಯಾಣಭತ್ಯೆ, ಊಟೋಪಹಾರ ಮತ್ತು ಆಹ್ವಾನ ಪತ್ರಿಕೆ, ಕಾರ್ಯಕ್ರಮಕ್ಕೆ ಬಳಸಿದ ವಾಹನ ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು.<br>➢ |
| 27 | **ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವ ಸ್ಮರಣಾರ್ಥ ಕಾರ್ಯಕ್ರಮ**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.1,05,587/-** | **ರೂ.1,05,587/-** | ➢ 2018-19ನೇ ಸಾಲಿನಲ್ಲಿ ಬಿಡುಗಡೆಯಾದ ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವ ಸ್ಮರಣಾರ್ಥ ಕಟ್ಟುವೆವು ನಾವು ಹೊಸನಾಡೊಂದನ್ನು ಎನ್ನುವ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುವುದು.<br>➢ ಈ ಕಾರ್ಯಕ್ರಮಗಳಲ್ಲಿ ಮಂಡಿತವಾಗುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಮತ್ತು ವಿದ್ವಾಂಸರ ಸಂಭಾವನೆ, ಪ್ರಯಾಣ ಭತ್ಯೆ, ಊಟೋಪಹಾರ ಆಹ್ವಾನ ಪತ್ರಿಕೆ, ಕಾರ್ಯಕ್ರಮಕ್ಕೆ ಬಳಸಿದ ವಾಹನ ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು. |

| | | | |
|---|---|---|---|
| 28 | **ವಿಶೇಷ ಘಟಕ ಯೋಜನೆ–01**<br><br>2021–22ನೇ ಸಾಲಿನ ಉಳಿಕೆ ಮೊತ್ತ **ರೂ.5,52,195/–** | **ರೂ.5,52,195/–** | ➤ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಸಾಹಿತ್ಯ ವಿಮರ್ಶೆ, ಕಥೆ ಕಾವ್ಯ ಸಂಸ್ಕೃತಿ ಮತ್ತು ಕೌಶಲ್ಯ ವೃದ್ಧಿ ಕುರಿತು ಕಮ್ಮಟ, ಕಾರ್ಯಾಗಾರ, ಅಧ್ಯಯನ, ಶಿಬಿರ ಏರ್ಪಡಿಸುವುದು,<br>➤ ಈ ಕಾರ್ಯಕ್ರಮಗಳಲ್ಲಿ ಮಂಡಿತವಾಗುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಮತ್ತು ವಿದ್ವಾಂಸರ ಸಂಭಾವನೆ, ಪ್ರಯಾಣ ಭತ್ಯೆ, ಊಟೋಪಹಾರ ಆಹ್ವಾನ ಪತ್ರಿಕೆ, ಕಾರ್ಯಕ್ರಮಕ್ಕೆ ಬಳಸಿದ ವಾಹನ ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು<br>➤ ಮುಂದುವರಿದ ಫೆಲೋಶಿಪ್ ಕೃತಿಗಳ ಮುದ್ರಣ |
| | **ವಿಶೇಷ ಘಟಕ ಯೋಜನೆ–02** | | ➤ 2022–23ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಗೆ ಅನುದಾನ ಬಿಡುಗಡೆಯಾದಲ್ಲಿ ಅನುದಾನದ ಮೊತ್ತಕ್ಕನುಗುಣವಾಗಿ ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಲಾಗುತ್ತದೆಯೋ ಆ ಉದ್ದೇಶಕ್ಕನುಗುಣವಾಗಿ ಯೋಜನೆಯನ್ನು ರೂಪಿಸಿಕೊಂಡು ಬಳಸಿಕೊಳ್ಳಲಾಗುವುದು. |
| 29 | **ಗಿರಿಜನ ಉಪ ಯೋಜನೆ –01**<br><br>2021–22ನೇ ಸಾಲಿನ ಒಟ್ಟು ಉಳಿಕೆ ಮೊತ್ತ **ರೂ.22,07,662/–** | **ರೂ.20,87,662/–** | ➤ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಸಾಹಿತ್ಯ ವಿಮರ್ಶೆ, ಕಥೆ ಕಾವ್ಯ ಸಂಸ್ಕೃತಿ ಮತ್ತು ಕೌಶಲ್ಯ ವೃದ್ಧಿ ಕುರಿತು ಕಮ್ಮಟ, ಕಾರ್ಯಾಗಾರ, ಅಧ್ಯಾಯನ, ಶಿಬಿರ ಏರ್ಪಡಿಸುವುದು,<br>➤ ಈ ಕಾರ್ಯಕ್ರಮಗಳಲ್ಲಿ ಮಂಡಿತವಾಗುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಮತ್ತು ವಿದ್ವಾಂಸರ ಸಂಭಾವನೆ, ಪ್ರಯಾಣ ಭತ್ಯೆ, ಊಟೋಪಹಾರ ಆಹ್ವಾನ ಪತ್ರಿಕೆ, ಕಾರ್ಯಕ್ರಮಕ್ಕೆ ಬಳಸಿದ ವಾಹನ ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು.<br>➤ ಮುಂದುವರಿದ ಫೆಲೋಶಿಪ್ ಕೃತಿಗಳ ಮುದ್ರಣ<br>➤ 2022–23ನೇ ಸಾಲಿನ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ 12ರ ದಲಿತ ಕ್ರೈಸ್ತ ಸಾಂಸ್ಕೃತಿಕ ಶೋಧ ಮಾಲೆ ಯೋಜನೆಗೆ ಮರುಹೊಂದಾಣಿಕೆ **ರೂ.1,20,000/–** |
| | **ಗಿರಿಜನ ಉಪ ಯೋಜನೆ –02** | | ➤ 2022–23ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಗೆ ಅನುದಾನ ಬಿಡುಗಡೆಯಾದಲ್ಲಿ ಅನುದಾನದ ಮೊತ್ತಕ್ಕನುಗುಣವಾಗಿ ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಲಾಗುತ್ತದೆಯೋ ಆ ಉದ್ದೇಶಕ್ಕನುಗುಣವಾಗಿ ಯೋಜನೆಯನ್ನು ರೂಪಿಸಿಕೊಂಡು ಬಳಸಿಕೊಳ್ಳಲಾಗುವುದು. |

| | | | |
|---|---|---|---|
| 30 | **ಕೋವಿಡ್-19 ಧನಸಹಾಯ**<br><br>2021-22ನೇ ಸಾಲಿನ ಒಟ್ಟು ಉಳಿಕೆ ಮೊತ್ತ **ರೂ.58,000/-** | **ರೂ.58,000/-** | ➢ ಕೋವಿಡ್-19ರ ಧನಸಹಾಯ ಆರ್.ಟಿ.ಜಿ.ಎಸ್ ತಿರಸ್ಕೃತ ಮತ್ತು ಮಾಸಾಶನ ಪಡೆಯುತ್ತಿದ್ದ ಕಲಾವಿದರು ಹಾಗು ಇತರೆ ಕಾರಣಗಳಿಂದ ಖಾತೆಗೆ ಮರು ಜಮಾ ಆದ ಬಾಬ್ತು |
| 31 | **ದತ್ತಿನಿಧಿ ಬಡ್ಡಿ**<br><br>2021-22ನೇ ಸಾಲಿನ ಒಟ್ಟು ಉಳಿಕೆ ಮೊತ್ತ **ರೂ.2,26,944/-** | **ರೂ.2,26,944/-** | ➢ 2022-23ನೇ ಸಾಲಿನಲ್ಲಿ ಬರುವ ನಿರೀಕ್ಷಿತ 10 ದತ್ತಿನಿಧಿ ಬಡ್ಡಿ ಮೊತ್ತದಲ್ಲಿ ಬಹುಮಾನಿತ ಕೃತಿಗಳಿಗೆ ದತ್ತಿ ಬಹುಮಾನ ನೀಡಲಾಗುವುದು. |
| 32 | **ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ**<br><br>2021-22ನೇ ಸಾಲಿನ ಒಟ್ಟು ಉಳಿಕೆ ಮೊತ್ತ **ರೂ.13,87,915/-** | **ರೂ.13,87,915/-** | ➢ ಬೀದರ್ ಜಿಲ್ಲೆಯ 43 ಗಡಿ ಗ್ರಾಮಗಳಲ್ಲಿ ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿಗೆ ಪೂರಕವಾಗಿ ಅನೌಪಚಾರಿಕ ಶಿಕ್ಷಣ ತರಬೇತಿ ಯೋಜನೆಯಡಿ 43 ಜನ ಸ್ವಯಂ ಶಿಕ್ಷಕರಿಗೆ ಪ್ರತಿ ತಿಂಗಳು ತಲಾ ರೂ.5,000/-, 4 ಜನ ತಾಲೂಕು ಮೇಲ್ವಿಚಾರಕರಿಗೆ ತಲಾ ರೂ.7,000/-, ಕಾರ್ಯಕ್ರಮ ಮೇಲ್ವಿಚಾರಕರಿಗೆ ರೂ.7,000/-, ಜಿಲ್ಲಾ ಸಂಯೋಜಕರಿಗೆ ರೂ.10,000/-, ಪ್ರಯಾಣ ಭತ್ಯೆಯೂ ಸೇರಿದಂತೆ ಮಾಸಿಕ ಗೌರವ ಸಂಭಾವನೆಯನ್ನು ಒಂಬತ್ತು ತಿಂಗಳು ನೀಡಲಾಗುವುದು. ಲೇಖನ ಸಾಮಗ್ರಿ, ಸಭಾ ಭತ್ಯೆ, ಇನ್ನಿತರ ವೆಚ್ಚಗಳ ಪಾವತಿ. |
| 33 | **ಅಮೃತ ಮಹೋತ್ಸವದ ಅಂಗವಾಗಿ 75 ಕಿರುಪುಸ್ತಕಗಳ ಪ್ರಕಟಣೆ**<br><br>2021-22ನೇ ಸಾಲಿನ ಒಟ್ಟು ಉಳಿಕೆ ಮೊತ್ತ **ರೂ.19,50,027/-** | **ರೂ.19,50,027/-** | ➢ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕರ್ನಾಟಕದಲ್ಲಿನ ಸ್ವಾತಂತ್ರ್ಯ ಹೋರಾಟದ 75 ಸ್ಥಳಗಳ ಕುರಿತು 75 ಕಿರುಪುಸ್ತಕಗಳ ಪ್ರಕಟಣೆ ಮುದ್ರಣವೆಚ್ಚ, ಸಂಪಾದಕರು, ಲೇಖಕರ ಸಂಭಾವನೆ, ಮುಖಪುಟ ವಿನ್ಯಾಸ ಸಂಭಾವನೆ, ಪುಸ್ತಕ ಬಿಡುಗಡೆ ವೆಚ್ಚ, ಸಭಾ ವೆಚ್ಚ ಪಾವತಿ |
| 34 | **ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮಗಳ ಅನುದಾನ**<br><br>2021-22ನೇ ಸಾಲಿನ ಒಟ್ಟು ಉಳಿಕೆ ಮೊತ್ತ **ರೂ.73,63,760/-** | **ರೂ.73,63,760/-** | ➢ ಸ್ವಾತಂತ್ರ್ಯ ಅಮೃತ ಮಹೋತ್ಸವದ ಕಾರ್ಯಕ್ರಮಗಳಿಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಲ್ಲಿ ರೂ.73,63,760/-ಗಳನ್ನು ಕಾಯ್ದಿರಿಸಿದ್ದು, ಕೇಂದ್ರ ಕಚೇರಿಯಿಂದ ಸೂಚಿಸುವ ಅಮೃತ ಮಹೋತ್ಸವ ಸಂಬಂಧದ ಬಿಲ್ಲುಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಬಾಬ್ತು |
| 35 | **ಬ್ಯಾಂಕ್ ಬಡ್ಡಿ** | | ➢ **ರೂ.3,50,000/-**ಗಳನ್ನು ಸಂಚಿತ ಸಿಬ್ಬಂದಿ ವೇತನಕ್ಕೆ ಮತ್ತು **ರೂ.1,50,000/-**ಗಳನ್ನು ಅಂಚೆ ಚೀಟಿ, ಕೊರಿಯರ್, ಫ್ರಾಂಕಿಂಗ್ ವೆಚ್ಚ ಪಾವತಿಗೆ ವಿನಿಯೋಗ ಮಾಡಲು ಲೆಕ್ಕ ಶೀರ್ಷಿಕೆ 16 ಮತ್ತು 19ಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. |

| | | | |
|---|---|---|---|
| 36 | **ಕಾರ್ಯಕ್ರಮ ಉಳಿಕೆ ಮತ್ತು ಇತರ ಜಮಾ** | | ➢ ಇತರೆ ಮೂಲಗಳಿಂದ ಅನುದಾನ ಖಾತೆಗೆ ಜಮೆಯಾಗುವ ಮೊತ್ತ ಹಾಗೂ ಆರ್.ಟಿ.ಜಿ.ಎಸ್. ತಿರಸ್ಕೃತ ಮೊತ್ತ |
| 37 | **ಅಕಾಡೆಮಿಯ 28 ಪುಸ್ತಕಗಳ ಮರುಮುದ್ರಣ**<br>**ಪುಸ್ತಕ ಮಾರಾಟ ಖಾತೆ**<br><br>2021-22ನೇ ಸಾಲಿನ ಉಳಿಕೆ ಮೊತ್ತ **ರೂ.19,63,775/-** | **ರೂ.17,63,775/-** | ➢ ಪಾರಿಭಾಷಿಕ ಮಾಲೆಯ-10 ಕೃತಿಗಳು, ಅರವಿಂದ ದರ್ಶನ, ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ, ಕಾವ್ಯ ಸೃಷ್ಟಿಯ ಸ್ವರೂಪ, ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ, ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ, ಭಾರತೀಯ ಸಾಹಿತ್ಯ ಸಮಾಜ ಮತ್ತು ಸಂಸ್ಕೃತಿ, ಶತಮಾನದ ಸಂಕಲನದ-8 ಕೃತಿಗಳು, ಭಾರತೀಯ ಸಾಹಿತ್ಯ ಸಮೀಕ್ಷೆಯ-2ಸಂಪುಟಗಳು, ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ, ಸಾಲುದೀಪಗಳು ಕೃತಿಗಳ ಮರುಮುದ್ರಣ.<br>➢ 2021-22ನೇ ಸಾಲಿನ ಲೆಕ್ಕ ಶೀರ್ಷಿಕೆ 38ರ ಅಕಾಡೆಮಿಯ 11 ಪುಸ್ತಕಗಳ ಮರುಮುದ್ರಣ ಯೋಜನೆಗೆ **ರೂ.2,00,000/-**ಗಳನ್ನು ಮರುಹೊಂದಾಣಿಕೆ ಮಾಡಿಕೊಳ್ಳಲಾಗಿದೆ. |
| 38 | **ಅಕಾಡೆಮಿಯ 11 ಪುಸ್ತಕಗಳ ಮರುಮುದ್ರಣ**<br>**ಪುಸ್ತಕ ಮಾರಾಟ ಖಾತೆ**<br><br>1. 2021-22ನೇ ಸಾಲಿನ ಅಕಾಡೆಮಿಯ 28 ಪುಸ್ತಕಗಳ ಮರುಮುದ್ರಣ ಯೋಜನೆಯಿಂದ **ರೂ.2,00,000/-**<br>2. ಅಕಾಡೆಮಿ ಪುಸ್ತಕಗಳ ಮರುಮುದ್ರಣ ಯೋಜನೆಯಿಂದ **ರೂ.2,17,931/-**<br>3. ಪುಸ್ತಕ ಮಾರಾಟ ಬಾಬ್ತಿನಿಂದ **ರೂ,2,42,876/-** | **ರೂ.6,60,807/-** | ➢ ಸಾಂಸ್ಕೃತಿಕ ವಲಯದಲ್ಲಿ ಅತಿಹೆಚ್ಚು ಬೇಡಿಕೆಯಿರುವ ಹಾಗು ಅತ್ಯಂತ ಅಗತ್ಯವಾದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕಗಳನ್ನು ಮರುಮುದ್ರಿಸುವುದು ಇದಕ್ಕೆ ತಗಲುವ ಮುದ್ರಣ ವೆಚ್ಚ, ಕರಡು ಪರಿಶೀಲನಾ ವೆಚ್ಚ ಹಾಗು ಸಂಪಾದಕರ ಸಂಭಾವನೆ ಪಾವತಿಸುವುದು.<br>➢ ಹೆಚ್ಚುವರಿ ವೆಚ್ಚವನ್ನು ಪುಸ್ತಕ ಮಾರಾಟ ಖಾತೆಯ ನಿರೀಕ್ಷಿತ ಮಾರಾಟದ ಹಣದಿಂದ ಭರಿಸಿಕೊಳ್ಳುವುದು. |
| 39 | **ಪುಸ್ತಕ ಮಾರಾಟ ಜಾಥ**<br>**ಪುಸ್ತಕ ಮಾರಾಟ ಖಾತೆ**<br><br>1. 2021-22ನೇ ಸಾಲಿನ ಪುಸ್ತಕ ಮಾರಾಟ ಉಳಿಕೆ **ರೂ.1,85,394.55**<br>2. 2021-22ನೇ ಸಾಲಿನ ಇ-ಬುಕ್ ಮತ್ತು ಅಂತರ್ಜಾಲ ಪುಸ್ತಕ ಮಾರಾಟ ಯೋಜನೆಯಿಂದ **ರೂ.1,00,000/-** | **ರೂ.2,85,394.55** | ➢ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆಯ ಪುಸ್ತಕಗಳಿಗೆ ಶೇ.50% ರಷ್ಟು ರಿಯಾಯಿತಿ ಇರುವ ಆಗಸ್ಟ್-2021 / ನವೆಂಬರ್-2021 / ಜನವರಿ-2022 ತಿಂಗಳುಗಳಲ್ಲಿ ಹಾಗು ಇತರೆ ಪ್ರಮುಖ ತಿಂಗಳುಗಳಲ್ಲಿ ಬಾಡಿಗೆವಾಹನ ಪಡೆದು ಅಗತ್ಯವಿರುವ ಸ್ಥಳಗಳಲ್ಲಿ ಪುಸ್ತಕ ಮಾರಾಟ ಮಾಡುವುದು. |

| | | | |
|---|---|---|---|
| 40 | **ಪುಸ್ತಕ ಮಾರಾಟ ಸಂಬಂಧ ವೆಚ್ಚ ಪಾವತಿ**<br>**ಪುಸ್ತಕ ಮಾರಾಟ ಖಾತೆ**<br><br>2021-22ನೇ ಸಾಲಿನ ಬ್ಯಾಂಕ್ ಬಡ್ಡಿಯಿಂದ<br>**ರೂ.1,13,017/-** | **ರೂ.1,13,017/-** | ➢ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆಯ ಪುಸ್ತಕಗಳನ್ನು ಸಮ್ಮೇಳನ, ಉತ್ಸವ, ಮಾರಾಟ ಮೇಳಗಳಲ್ಲಿ ಪುಸ್ತಕ ಮಾರಾಟ ಮಾಡಲು ಪುಸ್ತಕ ಸಾಗಾಣಿಕೆ ವೆಚ್ಚ, ಸಿಬ್ಬಂದಿಗಳ ದಿನ ಭತ್ಯೆ, ಪ್ರಯಾಣ ಭತ್ಯೆ, ವಸತಿ ವೆಚ್ಚ, ಇತರೆ ಸಾಂದರ್ಭಿಕ ವೆಚ್ಚ ಪಾವತಿ. |
| 41 | **ಅಮೃತ ಮಹೋತ್ಸವದ ಅಂಗವಾಗಿ 75 ಕಿರುಪುಸ್ತಕಗಳ ಮರುಮುದ್ರಣ**<br>**ಪುಸ್ತಕ ಮಾರಾಟ ಖಾತೆ**<br><br>ನಿರೀಕ್ಷಿತ ಮೊತ್ತ ರೂ.15,00,000/- | **ರೂ.15,00,000/-** | ➢ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕರ್ನಾಟಕದಲ್ಲಿನ ಸ್ವಾತಂತ್ರ್ಯ ಹೋರಾಟದ 75 ಕಿರುಪುಸ್ತಕಗಳ ಮರುಮುದ್ರಣವೆಚ್ಚ, ಸಭಾ ವೆಚ್ಚ ಪಾವತಿ |
| 42 | **ಕನ್ನಡ ಸಾಹಿತ್ಯದಲ್ಲಿ ಭಾರತದ ಪರಿಕಲ್ಪನೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>12,00,000/- | **ರೂ.12,00,000/-** | ➢ ಕನ್ನಡ ಸಾಹಿತ್ಯದಲ್ಲಿ ಭಾರತದ ಪರಿಕಲ್ಪನೆಯ ನೆಲೆಯಲ್ಲಿ ಈಗಾಗಲೇ ಪ್ರಕಟವಾಗಿರುವ ಕನ್ನಡ ನಾಟಕ, ಸಣ್ಣಕತೆ, ಕವಿತೆ ಹಾಗೂ ಲೇಖನಗಳನ್ನು ಗುರುತಿಸಿ ಸಂಪಾದಿಸಿ 500 ರಿಂದ 600 ಪುಟಗಳ 6 ಸಂಪುಟಗಳಲ್ಲಿ ಪ್ರಕಟಿಸುವ ಮಹತ್ವದ ಯೋಜನೆಯ ಸಂಪಾದಕರ ಸಂಭಾವನೆ, ಲೇಖಕರ ಸಂಭಾವನೆ, ಮುದ್ರಣ ವೆಚ್ಚ, ಕರಡಚ್ಚು ತಿದ್ದುವವರ ಸಂಭಾವನೆ, ಮುಖಪುಟ ವಿನ್ಯಾಸ, ಸಭಾವೆಚ್ಚ ಪಾವತಿ<br>➢ ಪುಸ್ತಕ ಪ್ರಕಟಣಾ ಮೊತ್ತ ಮುಗಿದ ನಂತರ ಪುಸ್ತಕ ಮಾರಾಟ ಖಾತೆಯಿಂದ ಭರಿಸಲಾಗುವುದು |
| 43 | **ಸಾಮಾಜಿಕ ನ್ಯಾಯ : ಒಂದು ಸಂವೇದನೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>2021-22ನೇ ಸಾಲಿನ ಉಳಿಕೆ **ರೂ.3,50,000/-** | **ರೂ.1,00,000/-** | ➢ ಸಾಮಾಜಿಕ ನ್ಯಾಯವನ್ನು ಕುರಿತಂತೆ ವಿವಿಧ ವಿದ್ವಾಂಸರು, ಸಾಮಾಜಿಕ ಚಿಂತಕರು, ಸಾಮಾಜಿಕ ಕಾರ್ಯಕರ್ತರಿಂದ ಲೇಖನಗಳನ್ನು ಬರೆಯಿಸಿ,ಚಿಂತನ ಮಂಥನಗಳೊಂದಿಗೆ ಸಾಮಾಜಿಕ ನ್ಯಾಯ ಒಂದು ಸಂವೇದನೆ ಎಂಬ ಕೃತಿ ಪ್ರಕಟಣೆಯ ಸಂಪಾದಕರ ಸಂಭಾವನೆ, ಲೇಖಕರ ಸಂಭಾವನೆ, ಮುದ್ರಣ ವೆಚ್ಚ, ಕರಡಚ್ಚು ಸಂಭಾವನೆ, ಮುಖಪುಟ ವಿನ್ಯಾಸ, ಸಭಾವೆಚ್ಚ ಪಾವತಿ<br>➢ ಲೆಕ್ಕ ಶೀರ್ಷಿಕೆ 58ರ ಕನ್ನಡ ಶಾಸನ ಸಾಹಿತ್ಯ ಸಿರಿ ಯೋಜನೆಗೆ **ರೂ.2,50,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. |

| | | | |
|---|---|---|---|
| 44 | **ಶ್ರೀಸಾಮಾನ್ಯರೆ ಅಸಾಮಾನ್ಯರ್**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.8,00,000/-** | **ರೂ.8,00,000/-** | ➢ ಶ್ರೀಸಾಮಾನ್ಯರು ಸಾಧಿಸಿರುವ ಅಸಾಮಾನ್ಯ ಸಾಧನೆಗಳನ್ನು ಗುರುತಿಸಿ ಅಂಥ ಅಸಾಮಾನ್ಯ ಸಾಧಕರ ಜೀವನಚರಿತ್ರೆಯನ್ನು, ಜೀವನ ಮೌಲ್ಯಗಳನ್ನು ಅವರ ಅನುಭವಗಳೊಂದಿಗೆ ದಾಖಲಿಸುವ ಮಹತ್ವದ ಪ್ರಕಟಣಾ ಮಾಲೆಯಡಿ ಮೂವತ್ತೂ ಜಿಲ್ಲೆಗಳಲ್ಲಿ ಕಂಡುಬರುವ ರೈತರು, ಕುಶಲಕರ್ಮಿಗಳು, ಯೋಧರು ಮೊದಲಾದ ಕ್ಷೇತ್ರಗಳಲ್ಲಿನ ಶ್ರೀಸಾಮಾನ್ಯರನ್ನು ಗುರುತಿಸಿ ಅಂಥವರ ಜೀವನ ಕಥನವನ್ನು ಬರೆಯಿಸುವುದು. ಈ ಯೋಜನೆಯ ಸಂಪಾದಕರು, ಲೇಖಕರ ಸಂಭಾವನೆ, ಕಾರ್ಯಾಗಾರದ ವೆಚ್ಚ, ಮುದ್ರಣ ವೆಚ್ಚ, ಕರಡಚ್ಚು ಸಂಭಾವನೆ, ಮುಖಪುಟ ವಿನ್ಯಾಸ, ಸಭಾವೆಚ್ಚ ಪಾವತಿ |
| 45 | **ಭಾರತೀಯ ಭಾಷಾ ಕವಿತೆಗಳಲ್ಲಿ ಭಾರತ**<br>**ಪುಸ್ತಕ ಪ್ರಕಟಣಾ ಖಾತೆ**<br><br>2021-22ನೇ ಸಾಲಿನ ಉಳಿಕೆ<br>**ರೂ.4,28,848.56** | **ರೂ.2,28,848.56** | ➢ ಭಾರತದ ದಕ್ಷಿಣ, ಮಧ್ಯ, ಉತ್ತರ, ಪೂರ್ವ, ಪಶ್ಚಿಮ ಭಾಗಗಳಲ್ಲಿ ಅವರದ್ದೇ ಆದ ವಿಶಿಷ್ಟ ಭಾಷೆ, ಸಾಹಿತ್ಯ-ಸಂಸ್ಕೃತಿಗಳಿವೆ. ಎಲ್ಲ ಪ್ರದೇಶದ ಭಾಷೆಗಳ ಮಹತ್ವದ ಕವಿಗಳು ತಮ್ಮ ತಮ್ಮ ಭಾಷೆಗಳಲ್ಲಿ ಭಾರತವನ್ನು ಹೇಗೆ ಚಿತ್ರಿಸಿದ್ದಾರೆ, ಭಾರತವನ್ನು ಕುರಿತ ಅವರ ಆಲೋಚನೆ, ಆಸೆ, ಆಕಾಂಕ್ಷೆಗಳು ಏನು ಎಂಬುದನ್ನು ಆಯಾ ಭಾಷೆಗಳ ಕವಿತೆಗಳ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ತಂದುಕೊಡುವ ಉದ್ದೇಶದಿಂದ ಸಂವಿಧಾನದ 8ನೆಯ ಅನುಚ್ಛೇದದ 22 ರಾಷ್ಟ್ರೀಯ ಭಾಷೆಗಳನ್ನು ಒಳಗೊಂಡಂತೆ ಎಷ್ಟು ಸಾಧ್ಯವೋ ಅಷ್ಟು ಭಾಷೆಗಳ ಪ್ರಾತಿನಿಧಿಕ ಕವಿಗಳ ಪ್ರಾತಿನಿಧಿಕ ಕವಿತೆಗಳನ್ನು "ಭಾರತೀಯ ಭಾಷಾ ಕವಿತೆಗಳಲ್ಲಿ ಭಾರತ" ಎಂಬ ಸಂಪಾದಿತ ಅನುವಾದ ಕೃತಿಯ ಮುದ್ರಣ ವೆಚ್ಚ, ಸಂಪಾದಕರ ಸಂಭಾವನೆ, ಭಾಷಾಂತರ ಸಂಭಾವನೆ, ಕರಡಚ್ಚು ಸಂಭಾವನೆ, ಲೇಖಕರ ಸಂಭಾವನೆ ಪಾವತಿ ವೆಚ್ಚ ಪಾವತಿ<br>➢ ಲೆಕ್ಕ ಶೀರ್ಷಿಕೆ 58ರ ಕನ್ನಡ ಶಾಸನ ಸಾಹಿತ್ಯ ಸಿರಿ ಯೋಜನೆಗೆ **ರೂ.2,00,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. |
| 46 | **ಆಧುನಿಕ ಕನ್ನಡ ಕವಿತೆಗಳಲ್ಲಿ ಸ್ತ್ರೀ**<br>**ಪುಸ್ತಕ ಪ್ರಕಟಣಾ ಖಾತೆ**<br><br>2021-22ನೇ ಸಾಲಿನ ಉಳಿಕೆ<br>**ರೂ.4,00,000/-** | **ರೂ.2,00,000/-** | ➢ ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಮ್ಮ ಕವಿಗಳು ತಮ್ಮ ಕವಿತೆಗಳಲ್ಲಿ ಸ್ತ್ರೀಯನ್ನು ಹೇಗೆ ಕಂಡು ಚಿತ್ರಿಸಿದ್ದಾರೆ ಎಂಬುದನ್ನರಿಯಲು ಅಧ್ಯಯನಕ್ಕೆ ಸಾಮಗ್ರಿಯನ್ನೊದಗಿಸಲು ಕರ್ನಾಟಕ ಅಕಾಡೆಮಿಯ ಆಧುನಿಕ ಕನ್ನಡ ಕವಿತೆಗಳಲ್ಲಿ ಸ್ತ್ರೀ ಎಂಬ ಸಂಪಾದಿತ ಕೃತಿಯ ಸಂಪಾದಕರ ಸಂಭಾವನೆ, ಕರಡಚ್ಚು ಸಂಭಾವನೆ, ಲೇಖಕರ ಸಂಭಾವನೆ ಪಾವತಿ ವೆಚ್ಚ<br>➢ ಲೆಕ್ಕ ಶೀರ್ಷಿಕೆ 58ರ ಕನ್ನಡ ಶಾಸನ ಸಾಹಿತ್ಯ ಸಿರಿ ಯೋಜನೆಗೆ **ರೂ.2,00,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. |

| | | | |
|---|---|---|---|
| 47 | **ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾಷಣ ಮಾಲೆ**<br><br>1. 2021-22ನೇ ಸಾಲಿನ **ಪುಸ್ತಕ ಪ್ರಕಟಣಾ** ಖಾತೆ ಉಳಿಕೆ **ರೂ.2,50,000/-**<br><br>2. 2021-22ನೇ ಸಾಲಿನ **ಅನುದಾನ ಖಾತೆ** ಉಳಿಕೆ **ರೂ.1,50,000/-** | **ರೂ.1,00,000/-** | ➢ ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಪ್ರಶಸ್ತಿ ಸ್ವೀಕಾರ ಸಂದರ್ಭದಲ್ಲಿ ಮಾಡಿದ ಭಾಷಣಗಳು ಓದುಗರಿಗೆ ಒಂದೆಡೆ ದೊರಕಲಿ ಎಂಬ ಉದ್ದೇಶದಿಂದ ಅವುಗಳನ್ನು ಸಂಕಲಿಸಿ, ಭಾಷಾಂತರಿಸಿ ಪುಸ್ತಕ ರೂಪದಲ್ಲಿ ಹೊರತರುವುದು, ಮುದ್ರಣ ವೆಚ್ಚ, ಸಂಪಾದಕರ ಸಂಭಾವನೆ, ಭಾಷಾಂತರ ಸಂಭಾವನೆ, ಕರಡಚ್ಚು ಸಂಭಾವನೆ ಪಾವತಿ ವೆಚ್ಚ<br>➢ ಲೆಕ್ಕ ಶೀರ್ಷಿಕೆ 58ರ ಕನ್ನಡ ಶಾಸನ ಸಾಹಿತ್ಯ ಸಿರಿ ಯೋಜನೆಗೆ **ರೂ.1,50,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ.<br>➢ ಲೆಕ್ಕ ಶೀರ್ಷಿಕೆ 15ರ ಉದ್ಯೋಗಮುಖಿ ಕನ್ನಡ ಯೋಜನೆಗೆ **ರೂ.1,50,000/-**ಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. |
| 48 | **ಮುಕ್ತ ಪ್ರಕಟಣಾ ಮಾಲಿಕೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.6,50,000/-** | **ರೂ.6,50,000/-** | ➢ 'ಮುಕ್ತ ಪ್ರಕಟಣಾ ಮಾಲಿಕೆ' ಹೆಸರಿನಲ್ಲಿ ಸಂಶೋಧನೆ, ವಿಮರ್ಶೆ, ಜೀವನಚರಿತ್ರೆ, ಆತ್ಮಕತೆ, ನಿಘಂಟು, ಈವರೆಗೆ ಬಾರದೇ ಇರುವ ಜ್ಞಾನಶಾಖೆಯ ಬಗ್ಗೆ ಪ್ರಕಟವಾಗಬಹುದಾದ 'ಜ್ಞಾನನಿಧಿ' ಎನಿಸಬಹುದಾದ ಶಾಸ್ತ್ರಜ್ಞಾನ ಹೆಚ್ಚಿಸುವ 100 ಪುಟಗಳಿಂದ 300 ಪುಟಗಳವರೆಗಿನ ಅಪ್ರಕಟಿತ ಕೃತಿಗಳ ಪ್ರಕಟಣೆ ಮುದ್ರಣ ವೆಚ್ಚ, ಗೌರವ ಸಂಭಾವನೆ, ಕರಡಚ್ಚು ಸಂಭಾವನೆ ಪಾವತಿ ವೆಚ್ಚ |
| 49 | **ಸಿದ್ಧಾಂತ ಶಿಖಾಮಣಿ ಕೃತಿ ಮುದ್ರಣ**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.2,71,980/-** | **ರೂ.2,71,980/-** | ➢ ಜೆ.ಎಸ್.ಎಸ್. ಗ್ರಂಥ ಮಾಲೆ, ಮೈಸೂರು ಇವರಿಂದ ಪ್ರಕಟವಾಗಿರುವ ಪೂಜ್ಯಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳ ಪ್ರವಚನ ಸಾರವನ್ನು ಶ್ರೀ ಸಿದ್ದೇಶ್ವರ ಸ್ವಾಮಿಗಳು ಸಂಗ್ರಹಿಸಿ ರಚಿಸಿರುವ 'ಸಿದ್ಧಾಂತ ಶಿಖಾಮಣಿ' ಕೃತಿಯ ಮರುಮುದ್ರಣ ವೆಚ್ಚ, ಕರಡಚ್ಚು ಸಂಭಾವನೆ, ಲೇಖಕರ ಸಂಭಾವನೆ ಪಾವತಿ ವೆಚ್ಚ |
| 50 | **ವಿ.ಕೃ. ಗೋಕಾಕ್ ಅವರ ಕೃತಿಗಳ ಪ್ರಕಟಣೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.19,08,492/-** | **ರೂ.19,08,492/-** | ➢ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ವಿ.ಕೃ.ಗೋಕಾಕರ ಸಮಗ್ರ ಸಾಹಿತ್ಯವನ್ನು 16 ಸಂಪುಟಗಳಲ್ಲಿ ಪ್ರಕಟಿಸುವುದು, ಮುದ್ರಣ ವೆಚ್ಚ, ಸಂಪಾದಕರ ಸಂಭಾವನೆ, ಕರಡಚ್ಚು, ಮುಖಪುಟ ವಿನ್ಯಾಸ ಸಂಭಾವನೆ ಪಾವತಿ ವೆಚ್ಚ |
| 51 | **ಕನ್ನಡದ ಮೇರುಕೃತಿಗಳ ಮುದ್ರಣ**<br>**ಪುಸ್ತಕ ಪ್ರಕಟಣಾ ಖಾತೆ**<br>**ರೂ.57,497/-** | **ರೂ.57,497/-** | ➢ ಕನ್ನಡದ ಮೇರುಕೃತಿಗಳ ಮುದ್ರಣ ಯೋಜನೆಯಡಿ ಪ್ರಕಟವಾಗುವ ಪುಸ್ತಕಗಳ ಮುದ್ರಣ ವೆಚ್ಚ, ಮುಖಪುಟ ಸಂಭಾವನೆ, ಹಕ್ಕುದಾರರ ಸಂಭಾವನೆ, ಕರಡು ತಿದ್ದಿದ ಸಂಭಾವನೆ ಪಾವತಿ ವೆಚ್ಚ |

| | | | |
|---|---|---|---|
| 52 | **ರಾವ್ ಬಹದ್ದೂರ್, ಎಲ್.ಬಸವರಾಜು ಮತ್ತು ಅ.ನ.ಕೃ. ಅವರ ಕೃತಿಗಳ ಪ್ರಕಟಣೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.5,08,843/-** | **ರೂ.5,08,843/-** | ➢ ರಾವ್ ಬಹದ್ದೂರ್, ಎಲ್.ಬಸವರಾಜು ಮತ್ತು ಅ.ನ.ಕೃ. ಅವರ ಕೃತಿಗಳ ಪ್ರಕಟಣೆ ಯೋಜನೆಯಡಿ ಪ್ರಕಟವಾಗುವ ಪುಸ್ತಕಗಳ ಮುದ್ರಣ ವೆಚ್ಚ, ಮುಖಪುಟ ಸಂಭಾವನೆ, ಹಕ್ಕುದಾರರ ಸಂಭಾವನೆ, ಕರಡು ತಿದ್ದಿದ ಸಂಭಾವನೆ ಪಾವತಿ ವೆಚ್ಚ |
| 53 | **ರಾಮಮನೋಹರ ಲೋಹಿಯಾ ಅವರ ಕೃತಿಗಳ ಪ್ರಕಟಣೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.12,34,326/-** | **ರೂ.12,34,326/-** | ➢ ರಾಮಮನೋಹರ ಲೋಹಿಯಾ ಅವರ ಕೃತಿಗಳ ಪ್ರಕಟಣೆ ಯೋಜನೆಯಡಿ ಪ್ರಕಟವಾಗುವ ಪುಸ್ತಕಗಳ ಮುದ್ರಣ ವೆಚ್ಚ, ಮುಖಪುಟ ಸಂಭಾವನೆ, ಹಕ್ಕುದಾರರ ಸಂಭಾವನೆ, ಕರಡು ತಿದ್ದಿದ ಸಂಭಾವನೆ ಪಾವತಿ ವೆಚ್ಚ |
| 54 | **ಕೀರ್ತಿನಾಥ ಕುರ್ತಕೋಟಿ ಅವರ ಕೃತಿಗಳ ಪ್ರಕಟಣೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.370/-** | **ರೂ.370/-** | ➢ ಕೀರ್ತಿನಾಥ ಕುರ್ತಕೋಟಿ ಅವರ ಕೃತಿಗಳ ಪ್ರಕಟಣೆ ಯೋಜನೆಯು ಪುಸ್ತಕಗಳ ಮುದ್ರಣ ವೆಚ್ಚ, ಮುಖಪುಟ ಸಂಭಾವನೆ, ಹಕ್ಕುದಾರರ ಸಂಭಾವನೆ, ಕರಡು ತಿದ್ದಿದ ಸಂಭಾವನೆ ಪಾವತಿಸಲು ಹಣ ಮಂಜೂರಾಗಿದ್ದು ಈಗ ಯೋಜನೆಯು ಮುಕ್ತಾಯವಾಗಿರುತ್ತದೆ. |
| 55 | **ಬಾಬು ಜಗಜೀವನರಾಂ ಅವರ ಕೃತಿಗಳ ಪ್ರಕಟಣೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.3,20,569/-** | **ರೂ.3,20,569/-** | ➢ ಬಾಬು ಜಗಜೀವನರಾಂ ಅವರ ಕೃತಿಗಳ ಪ್ರಕಟಣೆ ಯೋಜನೆಯಡಿ ಪ್ರಕಟವಾಗುವ ಪುಸ್ತಕಗಳ ಅನುವಾದಕರ ಸಂಭಾವನೆ, ಸಭಾವೆಚ್ಚ, ಮುದ್ರಣ ವೆಚ್ಚ, ಮುಖಪುಟ ಸಂಭಾವನೆ, ಸಂಪಾದಕರ ಸಂಭಾವನೆ, ಕರಡು ತಿದ್ದಿದ ಸಂಭಾವನೆ ಪಾವತಿ ವೆಚ್ಚ |
| 56 | **ರನ್ನನ ಕೃತಿಗಳ ಪ್ರಕಟಣೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.6,66,452/-** | **ರೂ.6,66,452/-** | ➢ ರನ್ನನ ಸಾಹಸ ಭೀಮ ವಿಜಯ ಮತ್ತು ಅಜಿತನಾಥ ಪುರಾಣ ಕೃತಿಗಳ ಮುದ್ರಣ ವೆಚ್ಚ, ಮುಖಪುಟ ಸಂಭಾವನೆ, ಹಕ್ಕುದಾರರ ಸಂಭಾವನೆ ಪಾವತಿ ವೆಚ್ಚ |
| 57 | **ಜಿ.ಪಿ ರಾಜರತ್ನಂ ಅವರ ಕೃತಿಗಳ ಪ್ರಕಟಣೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>**ರೂ.2,36,862/-** | **ರೂ.2,36,862/-** | ➢ ಜಿ.ಪಿ ರಾಜರತ್ನಂ ಅವರ ಕೃತಿಗಳ ಪ್ರಕಟಣೆ ಯೋಜನೆಯಡಿ ಪ್ರಕಟವಾಗುವ ಪುಸ್ತಕಗಳ ಮುದ್ರಣ ವೆಚ್ಚ, ಮುಖಪುಟ ಸಂಭಾವನೆ, ಸಂಪಾದಕರ ಸಂಭಾವನೆ, ಕರಡು ತಿದ್ದಿದ ಸಂಭಾವನೆ ಪಾವತಿ ವೆಚ್ಚ |

| | | | |
|---|---|---|---|
| 58 | **ಶಾಸನ ಸಾಹಿತ್ಯ ಸಿರಿ ಪ್ರಕಟಣೆ**<br>**ಪುಸ್ತಕ ಪ್ರಕಟಣಾ ಖಾತೆ**<br><br>1. 2021-22ನೇ ಸಾಲಿನ ಸಾಮಾಜಿಕ ನ್ಯಾಯ ಒಂದು ಸಂವೇದನೆ ಯೋಜನೆಯಿಂದ ರೂ.2,50,000/-<br>2. 2021-22ನೇ ಸಾಲಿನ ಭಾರತೀಯ ಭಾಷಾ ಕವಿತೆಗಳಲ್ಲಿ ಭಾರತ ಯೋಜನೆಯಿಂದ ರೂ.2,00,000/-<br>3. 2021-22ನೇ ಸಾಲಿನ ಆಧುನಿಕ ಕನ್ನಡ ಕವಿತೆಗಳಲ್ಲಿ ಸ್ತ್ರೀ ಯೋಜನೆಯಿಂದ ರೂ.2,00,000/-<br>4. 2021-22ನೇ ಸಾಲಿನ ಜ್ಞಾನಪೀಠ ಪ್ರಶಸ್ತಿ ವಿಜೇತರ ಮಾಲೆ ಯೋಜನೆಯಿಂದ ರೂ.1,50,000/-<br>5. 2021-22ನೇ ಸಾಲಿನ ಬ್ಯಾಂಕ್ ಬಡ್ಡಿಯಿಂದ ರೂ.1,94,222/-<br><br>**ಒಟ್ಟು ರೂ.9,94,222/-** | **ರೂ.9,94,222/-** | ➢ ಶಾಸನಗಳಲ್ಲಿರುವ ಸಾಹಿತ್ಯವನ್ನು ಛಂದೋಬದ್ಧವಾದ ಸಾಲುಗಳ ವಿಭಜನೆಗಳೊಂದಿಗೆ ಆಯಾಕಾಲ ರಾಜಮನೆತನ, ಶಾಸನ ರಚನಾ ಸಂದರ್ಭದ ಮಹತ್ವ, ವಿಷಯ ಪ್ರತಿಪಾದನೆ ಮೊದಲಾದ ಸಂಕ್ಷಿಪ್ತ ವಿವರಗಳೊಂದಿಗೆ ಕನ್ನಡ ಶಾಸನ ಸಾಹಿತ್ಯ ಸಿರಿ ಸಂಪುಟಗಳನ್ನು ಹಿರಿಯ ವಿದ್ವಾಂಸರಿಂದ ಸಂಪಾದಿಸಿ ಅಂದಾಜು ತಲಾ ಸುಮಾರು 800 ಪುಟಗಳನ್ನೊಳಗೊಂಡ 10 ಸಂಪುಟಗಳ ಮುದ್ರಣ ವೆಚ್ಚ, ಮುಖಪುಟ ಸಂಭಾವನೆ, ಸಂಪಾದಕರ ಸಂಭಾವನೆ, ಕರಡು ತಿದ್ದಿದ ಸಂಭಾವನೆ, ಸಭೆ ಪಾವತಿ ವೆಚ್ಚ |
| **ಒಟ್ಟು** | | **ರೂ.5,96,01,383.24**<br>(ಐದು ಕೋಟಿ ತೊಂಭತ್ತಾರು ಲಕ್ಷದ ಒಂದು ಸಾವಿರದ ಮೂರುನೂರ ಎಂಬತ್ತಮೂರು ರೂಪಾಯಿ ಇಪ್ಪತ್ತನಾಲ್ಕು ಪೈಸೆ ಮಾತ್ರ) | |

ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ